ದೆಹಲಿ ಕರ್ನಾಟಕ ಸಂಘದ

# ಅಭಿಮತ

75
ಅಮೃತ ಮಹೋತ್ಸವ ವರ್ಷ
(1948-2022)

ಫೆಬ್ರವರಿ 2022
ಬೆಲೆ ರೂ. 1

**ನವದೆಹಲಿಯ ರಾಜಪಥದಲ್ಲಿ**
**2022ರ ಗಣರಾಜ್ಯೋತ್ಸವ ಪಥಸಂಚಲನ**




## ಕರ್ನಾಟಕದ ಸುವರ್ಣ ಮಹೋತ್ಸವ ಸಂಭ್ರಮ ಬಿಂಬಿಸುವ
## ‘ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು’
# ಸ್ತಬ್ಧಚಿತ್ರಕ್ಕೆ ದ್ವಿತೀಯ ಬಹುಮಾನ



# ದೆಹಲಿ ಕರ್ನಾಟಕ ಸಂಘದಲ್ಲಿ 73 ನೇ ಗಣರಾಜ್ಯೋತ್ಸವ ಆಚರಣೆ

ದಿನಾಂಕ 26.01.2022 ರಂದು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಆವರಣದಲ್ಲಿ ಭಾರತದ 73ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ದೇಶಭಕ್ತಿಯೊಂದಿಗೆ ಆಚರಿಸಲಾಯಿತು.

ಬೆಳಿಗ್ಗೆ ಸಮಯ 9.30 ಕ್ಕೆ ಸರಿಯಾಗಿ ರಾಷ್ಟ್ರಧ್ವಜಾರೋಹಣ ಮತ್ತು ರಾಷ್ಟ್ರಗೀತೆ ಹಾಡುವುದರ ಮೂಲಕ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸದಸ್ಯರು ಮತ್ತು ನೆರೆದಿದ್ದ ದೆಹಲಿ ಕನ್ನಡಿಗರೊಂದಿಗೆ ದೇಶದ ಹೆಮ್ಮೆಯ ಗಣರಾಜ್ಯೋತ್ಸವವನ್ನು ಅತ್ಯಂತ ಸಂಭ್ರಮ ಮತ್ತು ಉತ್ಸಾಹದಿಂದ ಆಚರಣೆ ಮಾಡಲಾಯಿತು. ದೆಹಲಿಯ ಕೊರೆಯುವ ಚಳಿಯನ್ನೂ ಲೆಕ್ಕಿಸದೆ ಈ ಸಂದರ್ಭದಲ್ಲಿ ಹಾಜರಿದ್ದ ಎಲ್ಲರೂ ರಾಷ್ಟ್ರಧ್ವಜಕ್ಕೆ ವಂದನೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ನಮ್ಮ ಕಾರ್ಯಕಾರಿ ಸಮಿತಿ ಅಧಿಕಾರ ವಹಿಸಿಕೊಂಡ ನಂತರ ಇದು ಪ್ರಥಮ ಗಣರಾಜ್ಯೋತ್ಸವ ಆಚರಣೆ. ಭಾರತದ ಸ್ವಾತಂತ್ರ ಅಮೃತ ಮಹೋತ್ಸವ ಆಚರಣೆ ಸಂದರ್ಭದಲ್ಲಿ ನಮ್ಮ ಸಂವಿಧಾನ ಅಂಗೀಕೃತವಾಗಿ ಇಂದಿಗೆ 72 ವರ್ಷಗಳು ತುಂಬಿದ್ದು ನಾವು 73 ನೇ ಗಣರಾಜ್ಯೋತ್ಸವ ಸಂಘದಲ್ಲಿ ಆಚರಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಈ ಸಂದರ್ಭದಲ್ಲಿ ನಮ್ಮ ದೇಶಕ್ಕೆ ಸಂವಿಧಾನವನ್ನು ನೀಡಿದ ದಿ. ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಎಲ್ಲ ರಚನಕಾರರು ಮತ್ತು ಕಾರಣಕರ್ತರನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ. ಅವರೆಲ್ಲರನ್ನು ನೆನಪಿಸಿಕೊಳ್ಳುತ್ತಾ ಈ ಕೊರೊನಾ ಕಾಲದ ಸಮಯದಲ್ಲಿಯೂ ಚಳಿಗಾಲದ ಮುಂಜಾನೆ ನೀವೆಲ್ಲರೂ ಬಂದು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ನನಗೆ ತುಂಬಾ ಸಂತೋಷವಾಗುತ್ತಿದೆ ಎಂದು ಹೇಳುತ್ತ ಎಲ್ಲರಿಗೂ ಗಣರಾಜ್ಯೋತ್ಸವದ ಶುಭಾಶಯಗಳನ್ನು ಮತ್ತು ಅಭಿನಂದನೆಗಳನ್ನು ತಿಳಿಸಿದರು. ಹಾಗೇನೇ ಸಂಘದ ಅಮೃತ ಮಹೋತ್ಸವ ವರ್ಷಾಚರಣೆಯ ಕಾರ್ಯಕ್ರಮಗಳನ್ನು ಬರುವ ದಿನಗಳಲ್ಲಿ ಸರ್ಕಾರದ ಕೊರೊನಾ ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಂಡು ಸಂಘದಲ್ಲಿ ಆಯೋಜಿಸಲಾಗುವುದು ಎಂದು ತಿಳಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಮಾತನಾಡಿ ಪ್ರತಿವರ್ಷದಂತೆ ಈ ವರ್ಷವೂ ಕೂಡ ಗಣರಾಜ್ಯೋತ್ಸವವನ್ನು ನಾವು ಸಂಘದಲ್ಲಿ ಆಚರಿಸುತ್ತಿದ್ದೇವೆ. ಇದು ಪ್ರತಿಯೊಬ್ಬ ಭಾರತೀಯರಿಗೂ ಹೆಮ್ಮೆಯ ಪ್ರತೀಕ, ಮುಂದಿನ ದಿನಗಳಲ್ಲಿ ಕೊರೊನಾ ಕಡಿಮೆಯಾದ ನಂತರ ಹೆಚ್ಚಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು. ಸಮಸ್ತ ದೆಹಲಿ ಕನ್ನಡಿಗರಿಗೆ ಗಣರಾಜ್ಯೋತ್ಸವದ ಶುಭಾಶಯಗಳನ್ನು ಕೋರುತ್ತಾ ಭಾಗವಹಿಸಿದ್ದ ಎಲ್ಲರನ್ನೂ ಸಂಘದ ಪರವಾಗಿ ವಂದಿಸಿದರು.

ದೆಹಲಿ ಕರ್ನಾಟಕ ಸಂಘದ ಪ್ರಪ್ರಥಮ ವರ್ಣರಂಜಿತ ಕ್ಯಾಲೆಂಡರನ್ನು



**ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಅಂಗವಾಗಿ ವರ್ಣರಂಜಿತ ಕ್ಯಾಲೆಂಡರ್ ಬಿಡುಗಡೆ**

ಮಾನ್ಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಜಂಟಿಯಾಗಿ ಈ ಸಂದರ್ಭದಲ್ಲಿ ಬಿಡುಗಡೆ ಮಾಡಿದರು. ಕ್ಯಾಲೆಂಡರನ್ನು ಹೊರತರುವಲ್ಲಿ ಸಹಕರಿಸಿದ ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ಹಾಗು ಮ್ಯಾನೇಜರ್ ಶ್ರೀ ಶೇಖರ್ ಅವರಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಲಾಯಿತು. ಸಂಘದ ಸದಸ್ಯರು ಕಾರ್ಯಾಲಯದಿಂದ ತಮ್ಮ ತಮ್ಮ ಕ್ಯಾಲೆಂಡರ್ ಪ್ರತಿಯನ್ನು ಪಡೆದುಕೊಳ್ಳಬಹುದು ಎಂಬ ಸೂಚನೆ ನೀಡಲಾಯಿತು.

ಗಣರಾಜ್ಯೋತ್ಸವ ಆಚರಣೆಯ ಈ ಶುಭ ಸಂದರ್ಭದಲ್ಲಿ ಕೋಶಾಧಿಕಾರಿ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಸುಮಿತಾ ಮುರಗೋಡ, ಶ್ರೀ ಬಿ. ನಾರಾಯಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀ ಚಂದ್ರಶೇಖರ ಎನ್.ಪಿ, ಶ್ರೀ ಶಿವಪ್ಪ ಎಂ, ಶ್ರೀ ಕೆ.ಎಸ್. ಮೂರ್ತಿ ಸೇರಿದಂತೆ, ಸಂಘದ ಸದಸ್ಯರುಗಳಾದ ಶ್ರೀಮತಿ ಶೋಭಾ ನಾಗರಾಜ್, ಶ್ರೀಮತಿ ದೀಪಾ ಶಿವಪ್ಪ, ಶ್ರೀಮತಿ ಹೇಮಾಶ್ರೀ ಚಂದ್ರಶೇಖರ್, ಶ್ರೀಮತಿ ಮಂಜುಳಾ ಹೂಗಾರ್, ಶ್ರೀಮತಿ ರೂಪಶ್ರೀ, ಶ್ರೀ ನರಸಿಂಹ ಮೂರ್ತಿ, ಶ್ರೀ ಪ್ರಹ್ಲಾದ್, ಶ್ರೀ ಯಲ್ಲಾಲಿಂಗ ಕೊಪ್ಪದ, ಶ್ರೀ ಕೃಷ್ಣರಾಜ್ ಕೆ.ಎನ್., ಶ್ರೀ ಆನಂದ ಮುರಗೋಡ, ಶ್ರೀ ಶರೀಫ್, ಶ್ರೀ ಮಂಜುನಾಥ, ಸಂಘದ ವ್ಯವಸ್ಥಾಪಕ ಸಿಬ್ಬಂದಿ ಮತ್ತು ನೌಕರ ವರ್ಗದವರು, ಮತ್ತಿತರು ಹಾಜರಿದ್ದರು.

**ಅಭಿಮತ ವರದಿ**

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 । ಸಂಚಿಕೆ 5
ಫೆಬ್ರವರಿ 2022

**ಪ್ರಧಾನ ಸಂಪಾದಕ**
ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳಿ ಸದಸ್ಯರು**
ಕೆ.ಎಸ್. ಮೂರ್ತಿ
ಅಮರೇಶ ದೊಡ್ಡಮನಿ
ಯಲ್ಲಾಲಿಂಗ ಕೊಪ್ಪದ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**
ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್


**ಪ್ರಧಾನ ಕಾರ್ಯದರ್ಶಿ**
ಆರ್. ರೇಣುಕುಮಾರ್

**ಕೋಶಾಧಿಕಾರಿ**
ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**
ಬಿ. ನಾರಾಯಣ
ಸುಮಿತಾ ಮುರಗೋಡ

**ಸಮಿತಿ ಸದಸ್ಯರು**
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜಿ
ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**
ಅನಂತರಾಮ ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ



## ಸಂಪಾದಕೀಯ

# ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕಣ್ಮನ ಸೆಳೆದ ಕರ್ನಾಟಕ ಕರಕುಶಲ ಕಲೆಗಳ ಸ್ತಬ್ಧಚಿತ್ರ

ಓದುಗ ಬಂಧುಗಳೇ ನಮಸ್ಕಾರ. ತಮಗೆಲ್ಲರಿಗೂ ಮಕರ ಸಂಕ್ರಾಂತಿ ಹಬ್ಬ ಹಾಗೂ ಭವ್ಯ ಭಾರತದ 73 ನೇ ಗಣರಾಜ್ಯೋತ್ಸವದ ಶುಭಾಶಯಗಳು. ನಮ್ಮ ಹೆಮ್ಮೆಯ ದೇಶ ಸ್ವಾತಂತ್ರ್ಯ ಗಳಿಸಿದಾಗ ಅದುವರೆಗೂ ಒಟ್ಟು 565 ಸಂಸ್ಥಾನ ರಾಜ್ಯಗಳು ಮತ್ತು 17 ಪ್ರಾಂತೀಯ ರಾಜ್ಯಗಳು ಹಾಗೂ ಫ್ರಾನ್ಸ್ ಮತ್ತು ಪೋರ್ಚುಗಲ್‌ನ ಎರಡು ವಸಾಹತುಗಳು ಅಸ್ತಿತ್ವದಲ್ಲಿದ್ದವು. ಅವುಗಳಲ್ಲಿ ಸ್ವಾತಂತ್ರ್ಯ ಭಾರತದ ಮೊದಲ ಗೃಹ ಮಂತ್ರಿ, ಉಕ್ಕಿನ ಮನುಷ್ಯಎಂದೇ ಖ್ಯಾತರಾದ ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ದೂರದರ್ಶಿತ್ವ ಮತ್ತು ಪ್ರಾಮಾಣಿಕ ಪ್ರಯತ್ನಗಳಿಂದಾಗಿ ಜಮ್ಮು, ಭೂಪಾಲ್, ಹೈದರಾಬಾದ್ ಮತ್ತು ಜುನಾಘರ್ ಹೊರತು ಪಡೆಸಿ ಉಳಿದವುಗಳು 1950ರ ಗಣತಂತ್ರ ದಿವಸ ಆಚರಣೆ ವೇಳೆಗೆ ಭಾರತ ಒಕ್ಕೂಟದಲ್ಲಿ ಬಹುತೇಕ ಸೇರ್ಪಡೆಗೊಂಡಿದ್ದವು. ಅನಂತರ ನಡೆದ ರಾಜ್ಯಗಳ ಪುನರ್ ವಿಂಗಡಣೆ ನಂತರ ನಮ್ಮ ದೇಶದಲ್ಲಿ 14 ರಾಜ್ಯಗಳು ಮತ್ತು 6 ಕೇಂದ್ರಾಡಳಿತ ಪ್ರದೇಶಗಳು ಭಾರತ ಒಕ್ಕೂಟದಲ್ಲಿದ್ದವು. ಇದೇ ರೀತಿ ಕಾಲಕಾಲಕ್ಕೆ ಬದಲಾದ ರಾಜಕೀಯ, ಸಾಂಸ್ಕೃತಿಕ ಪರಿಸ್ಥಿತಿಗಳಿಗನುಗುಣವಾಗಿ ಭಾರತ ಸರ್ಕಾರ ತೆಗೆದುಕೊಂಡ ನಿರ್ಧಾರದಿಂದಾಗಿ ಇನ್ನೂ ಅನೇಕ ರಾಜ್ಯಗಳು ಅಸ್ತಿತ್ವಕ್ಕೆ ಬಂದು, 2014ರ ವೇಳೆಗೆ ದೇಶದಲ್ಲಿ 29 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳಿದ್ದವು. ಕಳೆದ 2019 ರಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿದ ನಂತರ ಈಗ ದೇಶದಲ್ಲಿ ಒಟ್ಟು 28 ರಾಜ್ಯಗಳು ಮತ್ತು 9 ಕೇಂದ್ರಾಡಳಿತ ಪ್ರದೇಶಗಳಿವೆ. ಇಂತಹ ಬೃಹತ್ ಭಾರತದ ಶ್ರೀಮಂತ ಪರಂಪರೆಯನ್ನು, ಭವ್ಯ ಚರಿತ್ರೆಯನ್ನು ವಿಶ್ವಕ್ಕೆ ಪರಿಚಯಿಸುವ ವೈಭವೋಪೇತ ಹಾಗೂ ವರ್ಣರಂಜಿತ ಸಂದರ್ಭ ಭಾರತದ ಗಣತಂತ್ರೋತ್ಸವ ದಿನಾಚರಣೆ.

ಈ ಬಾರಿಯ ಗಣತಂತ್ರ ದಿನಾಚರಣೆಯಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮಕ್ಕೆ ಸಾಕ್ಷಿಯೆನಿಸುವಂತಹ ಅನೇಕ ವೈವಿಧ್ಯಮಯ ಸಾಧನೆಗಳ ನಡುವೆ ನವದೆಹಲಿಯ ಪ್ರತಿಷ್ಠಿತ ರಾಜಪಥ್‌ದಲ್ಲಿನ ಪಥಸಂಚಲನದಲ್ಲಿ ಕಣ್ಮನ ಸೆಳೆದವು. ಉತ್ತರಪ್ರದೇಶದ ಕಾಶಿ ವಿಶ್ವನಾಥ ಕಾರಿಡಾರ್ ಕುರಿತು ನಿರ್ಮಾಣಗೊಂಡಿದ್ದ ಟ್ಯಾಬ್ಲೋ ಸೇರಿದಂತೆ 12 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರ ಭಾಗಿಯಾಗಿದ್ದವು. ಇವುಗಳ ಪೈಕಿ ರಾಜ್ಯದ ಸುವರ್ಣ ಮಹೋತ್ಸವ ಸಂಭ್ರಮ ಬಿಂಬಿಸುವ 'ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು' ಎಂಬ ವಿಷಯಾಧಾರಿತ ಸ್ತಬ್ಧಚಿತ್ರಕ್ಕೆ ದ್ವಿತೀಯ ಬಹುಮಾನ ದೊರಕಿರುವುದು ಹೆಮ್ಮೆಯ ಸಂಗತಿ. ರಾಷ್ಟ್ರಮಟ್ಟದಲ್ಲಿನ ಇಂತಹ ಸಾಧನೆಗಾಗಿ ಹಲವು ತಿಂಗಳುಗಳ ಕಾಲ ಹಗಲಿರುಳು ಶ್ರಮಿಸಿದ ಎಲ್ಲ ಸಾಧಕರು, ಕುಶಲ ಕರ್ಮಿಗಳು, ನೆರವಾದ ಅಧಿಕಾರಿ ವೃಂದ ಹಾಗೂ ಸರ್ಕಾರ ಅಭಿನಂದನಾರ್ಹರು. ಕಾಶಿ ವಿಶ್ವನಾಥ ಕಾರಿಡಾರ್ ಕುರಿತು ನಿರ್ಮಾಣಗೊಂಡಿದ್ದ ಸ್ತಬ್ಧಚಿತ್ರಕ್ಕೆ ಮೊದಲ ಸ್ಥಾನ ಸಿಕ್ಕಿದೆ. ಕರ್ನಾಟಕ ಕರಕುಶಲ ಕಲೆಗಳ ಸ್ತಬ್ಧಚಿತ್ರ ವಿಶೇಷ ಆಕರ್ಷಣೆಯಿಂದ ಕೂಡಿದ್ದಲ್ಲದೆ ಕರ್ನಾಟಕದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ಭಾರತದಲ್ಲಿ ಸಾಂಪ್ರದಾಯಿಕ ಕರಕುಶಲ ಕಲೆಗಳ ತಾಯಿ ಎಂದೇ ಜನಪ್ರಿಯರಾಗಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಚಿತ್ರಣದಲ್ಲಿ, ಒಂದು ಗಂಧದ ಪೆಟ್ಟಿಗೆ, ನವಿಲಿನಾಕೃತಿಯ ಹಣೆಗಳು, ಸಂಡೂರಿನ ಬಾಳೆನಾರಿನ ಚೀಲಗಳನ್ನೊಳಗೊಂಡ ಬಾಗಿನ ನೀಡುತ್ತಿರುವಂತೆ ಕಮಲಾದೇವಿ ಅವರನ್ನು ಚಿತ್ರಿಸಲಾಗಿದ್ದುದು ಚಿತ್ತಾಕರ್ಷಕವಾಗಿತ್ತು. ಸಾಂಪ್ರದಾಯಿಕ ಕಲೆಗಳು ನಶಿಸಿ ಹೋಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ವರ್ಷಕ್ಕೊಮ್ಮೆ ನಡೆಯುವ ಈ ಪ್ರತಿಷ್ಠಿತ ಪಥಸಂಚಲನ ಕಾರ್ಯಕ್ರಮದಲ್ಲಿ ಕರಕುಶಲ ಕಲೆಗಳನ್ನು ಸ್ತಬ್ಧಚಿತ್ರದ ಮೂಲಕ ದೇಶದ ಹಾಗೂ ವಿಶ್ವದ ಗಮನ ಸೆಳೆಯುವಂತಾದುದು ನಿಜಕ್ಕೂ ಹೆಮ್ಮೆಯ ಸಂಗತಿ. ಈ ಮೂಲಕ ಗ್ರಾಮೀಣ ಭಾರತದ ತಾಯಿ ಬೇರುಗಳಂತಿರುವ ಕರಕುಶಲ ಕಲೆ, ಜನಪದ ಕಲೆ ಮತ್ತು ಅವುಗಳ ಕಲಾವಿದರುಗಳಿಗೆ ಉತ್ತೇಜನ ದೊರೆತು, ನಮ್ಮ ಗ್ರಾಮೀಣ ಕಲೆಗಳು ಜೀವಂತವಾಗಿರಲೆಂಬ ಆಶಯ ನಮ್ಮದು.

ಗಣರಾಜ್ಯೋತ್ಸವದ ಮುನ್ನಾ ದಿನ ಸಂಪ್ರದಾಯದಂತೆ 2022ರ ಸಾಲಿನ ಪದ್ಮ ಪ್ರಶಸ್ತಿ ಘೋಷಣೆ ಮಾಡಲಾಗಿದ್ದು ದಲಿತ ಕವಿ ದಿವಂಗತ ಸಿದ್ದಲಿಂಗಯ್ಯ ಅವರಿಗೆ ನೀಡಿದ ಮರಣೋತ್ತರ ಪದ್ಮಶ್ರೀ ಪ್ರಶಸ್ತಿಯೂ ಸೇರಿದಂತೆ ವಿವಿಧ ರಂಗಗಳ ಸಾಧಕರಿಗೆ 2022ರ ಪದ್ಮಶ್ರೀಯನ್ನು ಘೋಷಿಸಿರುವುದು ಹೆಮ್ಮೆಯ ಸಂಗತಿಯಾಗಿದೆ.

ಈ ವರ್ಷದ ಗಣರಾಜ್ಯೋತ್ಸವ ದಿನಾಚರಣೆಯ ಮತ್ತೊಂದು ವಿಶೇಷತೆ ಎಂದರೆ ಕರ್ನಾಟಕದ ಹೆಮ್ಮೆಯ ಕುವರಿಯರು ರಾಜಪಥ್‌ನಲ್ಲಿ ನಡೆದ ಪ್ರತಿಷ್ಠಿತ ಪಥಸಂಚಲನದಲ್ಲಿ ಸ್ಥಾನ ಪಡೆದು ರಾಜ್ಯದ ಕೀರ್ತಿಯನ್ನು ಹೆಚ್ಚಿಸಿದ್ದು. ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಮೊದಲ ವರ್ಷ ಬಿ.ಎಸ್.ಸಿ. ಪದವಿ ವ್ಯಾಸಂಗ ಮಾಡುತ್ತಿರುವ ಕುಮಾರಿ ಪ್ರಮೀಳ ಕುಂವರ್ ಅವರು ಎನ್.ಸಿ.ಸಿ. ಪಡೆಯ ಮುಂದಾಳತ್ವ ವಹಿಸಿ ಪಥಸಂಚಲನವನ್ನು ಮುನ್ನಡೆಸಿದರೆ, ಇದೇ ತಂಡದಲ್ಲಿ ಭಾಗವಹಿಸಿದ್ದ ದೆಹಲಿ ಕನ್ನಡಿಗರಾದ ಕುಮಾರಿ ರಿಷಿಕಾ ಬೆಳ್ಳಿಯಪ್ಪ ಅವರು ಹಾಗೂ ಕೇಂದ್ರೀಯ ಲೋಕ ನಿರ್ಮಾಣ ವಿಭಾಗವು ಸಿದ್ಧಪಡಿಸಿದ ಸ್ತಬ್ಧಚಿತ್ರದಲ್ಲಿ ಭಾಗವಹಿಸಿದ್ದ ಮತ್ತೊಬ್ಬ ದೆಹಲಿ ಕನ್ನಡಿಗರಾದ ಕುಮಾರಿ ನಿಸರ್ಗ ಅಶೋಕ್ ಈಟಿಯವರುಗಳಿಗೆ ಹೃದಯ ತುಂಬಿದ ಅಭಿನಂದನೆಗಳು.

ಗಣರಾಜ್ಯ ದಿನಾಚರಣೆಯನ್ನು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ವಿದ್ಯಾ ಸಂಸ್ಥೆ ಹಾಗೂ ದೆಹಲಿಯ ಕರ್ನಾಟಕ ಭವನಗಳಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹಾ ಕೊರೊನಾ ಮೂರನೇ ಅಲೆಯ ಸಂಕಷ್ಟಗಳ ನಡುವೆಯೂ ಸರಳವಾಗಿ ಸಾಂಪ್ರದಾಯಿಕವಾಗಿ ಆಚರಿಸಿದ್ದು ಕರ್ನಾಟಕ ಭವನದಲ್ಲಿ ಜನವರಿ 30 ರಂದು ಆಚರಿಸಿದ ಹುತಾತ್ಮರ ದಿನಾಚರಣೆ ವರದಿ, ಕನ್ನಡ ನಾಡಿನ ನುಡಿ, ನೆಲ, ಜಲಗಳ ವಿಷಯ ಬಂದಾಗ ಜನಪರ ಹೋರಾಟಗಾರರಾಗಿ ಮುಂಚೂಣಿಯಲ್ಲಿ ನಿಲ್ಲುತ್ತಿದ್ದ ದಿವಂಗತ ಚಂಪಾ ಅವರಿಗೆ ದೆಹಲಿ ಕರ್ನಾಟಕ ಸಂಘ ಆನ್‌ಲೈನ್ ಮೂಲಕ ನುಡಿನಮನ ಅರ್ಪಿಸಿದ ಕಾರ್ಯಕ್ರಮದ ವರದಿ, ಕೊಂಕಣಿ ಸರ್ದಾರ್ ಎಂದೇ ಖ್ಯಾತಿವೆತ್ತ ಕೊಂಕಣಿಯ ಕರ್ಮಯೋಗಿ ಬಸ್ತಿ ವಾಮನ ಶೆಣೈ ಅವರ ಕುರಿತ ಬರಹವೂ ಸೇರಿದಂತೆ ರಾಷ್ಟ್ರ ರಾಜಧಾನಿಯಲ್ಲಿನ ಕನ್ನಡಪರ ಸಂಘ ಸಂಸ್ಥೆಗಳ ವರದಿಗಳನ್ನು ಒಳಗೊಂಡಿರುವ ಫೆಬ್ರವರಿ 2022ರ ಅಭಿಮತವನ್ನು ನಿಮ್ಮ ಕೈಗಿಡುತ್ತಿದ್ದೇವೆ.

ಓದುಗ ಬಂಧುಗಳು, ಅಭಿಮತದಲ್ಲಿ ಪ್ರಕಟಿಸಲು ಸಂಬಂಧಿಸಿದ ನಿಮ್ಮ ಸೃಜನಾತ್ಮಕ ಬರಹಗಳನ್ನು, ಸಂಘದ ಸದಸ್ಯರುಗಳ ಹಾಗೂ ಮಕ್ಕಳ ವಿಶೇಷ ಸಾಧನೆ, ಪತ್ರಿಕೆಯ ಕುರಿತ ಸಕಾರಾತ್ಮಕ ಸಲಹೆಗಳನ್ನು ಸಂಘದ ಇಮೇಲ್‌ಗೆ ಕಳಿಸಿಕೊಡಬೇಕಾಗಿ ಕೋರುತ್ತೇವೆ. ಹಿಂದಿನ ಅಭಿಮತ ಸಂಚಿಕೆಗಳಿಗೆ ಓದುಗರಿಂದ ಉತ್ತಮ ಪ್ರತಿಕ್ರಿಯೆಗಳು ಬಂದಿದ್ದು, ಪ್ರೋತ್ಸಾಹಿಸಿದ ಎಲ್ಲರಿಗೂ ನಮ್ಮ ಕೃತಜ್ಞತೆಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 ಸಂಚಿಕೆ–5
ಫೆಬ್ರವರಿ–2022, ಬೆಲೆ ರೂ. 1

# ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳೇ, ತಮಗೆ ಹಾಗು ತಮ್ಮ ಕುಟುಂಬಕ್ಕೆ ಕ್ಯಾಲೆಂಡರ್ ಆಧಾರಿತ ಹೊಸ ವರ್ಷ 2022 ಮತ್ತು ಸಂಕ್ರಾಂತಿ ಹಬ್ಬದ ಶುಭಾಶಯಗಳು.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾರತದ ಸ್ವಾತಂತ್ರ ಅಮೃತ ಮಹೋತ್ಸವ ಆಚರಣೆ ಮತ್ತು ವಿಶಾಲ ಮೈಸೂರು ರಾಜ್ಯ ಕರ್ನಾಟಕವಾದ ಸುವರ್ಣ ಮಹೋತ್ಸವ ಆಚರಣೆಯ ಈ ಸಂದರ್ಭದಲ್ಲಿ ದೇಶದಾದ್ಯಂತ ಆಚರಿಸಿದ 73ನೇ ಗಣರಾಜ್ಯೋತ್ಸವದ ಹಾರ್ದಿಕ ಅಭಿನಂದನೆಗಳು. 1972 ರಲ್ಲಿ ಅಂದಿನ ಮಾನ್ಯ ಮುಖ್ಯಮಂತ್ರಿಗಳಾದ ದೇವರಾಜ ಅರಸು ಅವರು ಸ್ತಬ್ಧಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲು ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಗೆ ವಹಿಸಿದ್ದು ಅಂದಿನಿಂದಲೂ ನಡೆಯುತ್ತಾ ಬರುತ್ತಿದೆ. ಈ ಬಾರಿಯ ಗಣರಾಜ್ಯೋತ್ಸವದಲ್ಲಿ ರಾಷ್ಟ್ರ ರಾಜಧಾನಿ ದೆಹಲಿಯ ರಾಜಪಥ್‌ನಲ್ಲಿ ಪೆರೇಡ್ ನಡೆದಿದ್ದು ಎಂದಿನಂತೆ ದೇಶದ ವಿವಿಧ ರಾಜ್ಯಗಳ ಸ್ತಬ್ಧ ಚಿತ್ರಗಳು ಪ್ರದರ್ಶನಗೊಂಡಿದ್ದವು. ಈ ಬಾರಿ ಕರ್ನಾಟಕದಿಂದ ಕರಕುಶಲ ಕಲಾ ವೈಭವ ಪ್ರದರ್ಶನಗೊಂಡಿತ್ತು. ದೇಶಕ್ಕೆ 1947 ಆಗಸ್ಟ್ ಹದಿನೈದರಂದು ಸ್ವಾತಂತ್ರ್ಯ ಸಿಕ್ಕಿತು. ಸ್ವಾತಂತ್ರ ದೊರೆತ ಮೂರು ವರ್ಷಗಳ ನಂತರ 1950 ಜನವರಿ 26 ರಂದು ದೇಶ ತನ್ನ ಸಂವಿಧಾನವನ್ನು ಅಂಗೀಕರಿಸಿ ಗಣರಾಜ್ಯವಾಯಿತು. ದೇಶದಲ್ಲಿ ಪ್ರತಿವರ್ಷ ಜನವರಿ 26ರಂದು ಗಣರಾಜ್ಯೋತ್ಸವ ಆಚರಣೆ ಮಾಡುತ್ತೇವೆ. ನಮ್ಮ ದೇಶದ ಮೂರು ಸೇನಾದಳಗಳು ಭೂಸೇನೆ, ವಾಯುಸೇನೆ ಮತ್ತು ನೌಕಾಪಡೆಗಳ ಶಕ್ತಿ ಪ್ರದರ್ಶನವಾಗುತ್ತಿತ್ತು. ದೇಶದ ಸಾಂಸ್ಕೃತಿಕ ಕಲಾ ವೈಭವ ಅನಾವರಣಗೊಂಡಿದ್ದು. ಈ ಬಾರಿ ದಕ್ಷಿಣ ಭಾರತದ ರಾಜ್ಯಗಳ ಪೈಕಿ ರಾಜಪಥ್ ಪೆರೇಡ್‌ನಲ್ಲಿ ಪ್ರದರ್ಶನವಾಗಲು ಆಯ್ಕೆಯಾದ ಏಕೈಕ ಸ್ತಬ್ಧಚಿತ್ರ ಕರ್ನಾಟಕದ್ದು ಎನ್ನುವುದು ಹೆಮ್ಮೆಯ ವಿಷಯ. ನಾಡಿನ "ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು" ಎನ್ನುವ ಧ್ಯೇಯ ವಾಕ್ಯದಡಿ ನಮ್ಮ ರಾಜ್ಯದ ಸ್ತಬ್ಧಚಿತ್ರ ಪ್ರದರ್ಶನಗೊಂಡಿತ್ತು. ಈ ಗಣರಾಜ್ಯೋತ್ಸವದ ಪಥ ಸಂಚಲನದಲ್ಲಿ ವಿಶ್ವಪ್ರಸಿದ್ಧ ಚನ್ನಪಟ್ಟಣ ಗೊಂಬೆ, ಕಿನ್ನಾಳ ಗೊಂಬೆಗಳು, ಇಳಕಲ್ ಸೀರೆ, ಉಡುಪಿ ಸೀರೆ ಮತ್ತು ಮೈಸೂರು ಗಂಜೀಫಾ ಕಲೆಗಳೂ ಸೇರಿದಂತೆ ಐಜಿ ಟ್ಯಾಗ್ ಇರುವ ರಾಜ್ಯದ ಹದಿನಾರು ಪ್ರತಿಭಾವಂತರ ಕರಕುಶಲಗಾರಿಕೆ ಪ್ರದರ್ಶನವಾಗಿದೆ. ಈ ಪೆರೇಡ್‌ಗೆ ಕರ್ನಾಟಕದ ಟ್ಯಾಬ್ಲೋ ಹದಿಮೂರನೇ ಬಾರಿ ಆಯ್ಕೆಯಾಗಿರುವುದು ಸಂತಸದ ಸಂಗತಿ. ಅಚ್ಚುಕಟ್ಟಾಗಿ ಪ್ರರ್ದಶನ ಮಾಡಿಸಿದ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಎಸ್. ಬೊಮ್ಮಾಯಿಯವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಹಾಗೇನೇ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಅಧಿಕಾರಿ ವರ್ಗಕ್ಕೆ, ಇದನ್ನು ಜವಾಬ್ದಾರಿಯುತವಾಗಿ ನಡೆಸಿಕೊಟ್ಟ ಶ್ರೀ ಶಶಿಧರ ಅಡಪರವರಿಗೆ ವಿಶೇಷವಾಗಿ “ಕಂಗೀಲು ನೃತ್ಯ” ಮಾಡಿದ ನನ್ನ ಆತ್ಮೀಯ ಕಲಾವಿದ ಶ್ರೀ ಗುರುಚರಣ್ ಮತ್ತು ಅವರ ತಂಡಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ.

ಎನ್.ಸಿ.ಸಿ. ಪರೇಡ್‌ನ ಕಮಾಂಡ್ ವಹಿಸಿದ್ದ ನಮ್ಮ ಕರ್ನಾಟಕದ ಹೆಣ್ಣುಮಗಳು ಕುಮಾರಿ ಪ್ರಮೀಳ ಕುಂವರ್‌ರವರಿಗೆ, ಭಾಗಿಯಾದ ಎಲ್ಲ ಮಕ್ಕಳಿಗೆ ಜೊತೆಗೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಖಜಾಂಚಿಗಳಾದ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರ ಮಗಳಾದ ಕುಮಾರಿ ರಿಷಿಕಾ ಬೆಳ್ಳಿಯಪ್ಪರವರಿಗೆ ಮತ್ತು ಗಣರಾಜ್ಯೋತ್ಸವ ಸಿ.ಪಿ.ಡಬ್ಲ್ಯು.ಡಿ. ಟ್ಯಾಬ್ಲೋದಲ್ಲಿ ಭಾಗಿಯಾದ ಡಾ. ಅಶೋಕ್ ಎಂ.ಈಟಿ ರವರ ಮಗಳು ಕುಮಾರಿ ನಿಸರ್ಗರವರಿಗೆ ನನ್ನ ಹಾರ್ದಿಕ ಅಭಿನಂದನೆಗಳು. ಇವರೆಲ್ಲರನ್ನು ದೆಹಲಿ ಕರ್ನಾಟಕ ಸಂಘಕ್ಕೆ ಕರೆಸಿ ಅಭಿನಂದಿಸಬೇಕಾಗಿತ್ತು. ಸರ್ಕಾರದ ಆದೇಶದ ಅನುಸಾರ ಕಾರ್ಯಕ್ರಮಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ.

2022ನೇ ಸಾಲಿನ ಪದ್ಮಪ್ರಶಸ್ತಿ ಪುರಸ್ಕಾರಕ್ಕೆ ಆಯ್ಕೆಯಾಗಿರುವ ಹೆಮ್ಮೆಯ ಕನ್ನಡಿಗರಾದ ಶ್ರೀ ಸುಬ್ಬಣ್ಣ ಅಯ್ಯಪ್ಪನ್ (ವಿಜ್ಞಾನ ಮತ್ತು ಇಂಜಿನಿಯರಿಂಗ್), ಶ್ರೀ ಎಚ್.ಆರ್. ಕೇಶವಮೂರ್ತಿ (ಕಲಾ ಕ್ಷೇತ್ರ), ಶ್ರೀ ಅಬ್ದುಲ್ ಖಾದರ್ ನಾಡಕಟ್ಟೀನ್ (ಗ್ರಾಸ್ ರೂಟ್ಸ್ ಇನ್ನೊವೇಷನ್) ಮತ್ತು ಶ್ರೀ ಅಮೈ ಮಹಾಲಿಂಗ ನಾಯ್ಕ್ (ಕೃಷಿ ಕ್ಷೇತ್ರ) ಈ ಮಹನೀಯರುಗಳಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಮತ್ತು ಸಾಹಿತ್ಯ ಹಾಗು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ ಮರಣೋತ್ತರವಾಗಿ ಪದ್ಮಶ್ರೀ ಪ್ರಶಸ್ತಿ ನೀಡಲಾಗುತ್ತಿರುವ ದಲಿತ ಸಾಹಿತಿ ದಿ. ಸಿದ್ದಲಿಂಗಯ್ಯ ಅವರಿಗೆ ನಮ್ಮ ಗೌರವಪೂರ್ವಕ ನಮನಗಳು.

ದೆಹಲಿ ಕರ್ನಾಟಕ ಸಂಘಕ್ಕೆ ಅಮೃತ ಮಹೋತ್ಸವ ಸಂದರ್ಭ. ಕರ್ನಾಟಕ ಸಂಘದಿಂದ ಒಂದು ಸುಂದರ ವರ್ಣರಂಜಿತ ಕ್ಯಾಲೆಂಡರನ್ನು ಗಣರಾಜ್ಯೋತ್ಸವ ಆಚರಣೆ ಸಂದರ್ಭದಲ್ಲಿ ಬಿಡುಗಡೆ ಮಾಡಿದ್ದೇವೆ. ದಯವಿಟ್ಟು ಎಲ್ಲಾ ಸದಸ್ಯರುಗಳು ಈ ಕ್ಯಾಲೆಂಡರ್ ಅನ್ನು ಸಂಘದ ಕಾರ್ಯಾಲಯದಿಂದ ತೆಗೆದುಕೊಳ್ಳಿ.

ಬಂಧುಗಳೇ, ಮಾಡುವ ಕೆಲಸ ಕಾರ್ಯಗಳು ತುಂಬಾ ಇವೆ. ಆದರೆ ಕಾರ್ಯಕ್ರಮ ಮಾಡಲು ಅಡ್ಡಿಯಾಗಿರುವುದು ಮಾರಕ ರೋಗ ಕೊರೊನಾ. ಈ ಕೊರೊನಾವನ್ನು ಗಮನದಲ್ಲಿಟ್ಟುಕೊಂಡು ಬರುವ ದಿನಗಳಲ್ಲಿ ಇನ್ನೂ ಅನೇಕ ಉತ್ತಮವಾದ ಕಾರ್ಯಕ್ರಮಗಳನ್ನು ತಮ್ಮ ಮುಂದೆ ತರಲಿದ್ದೇವೆ. ಈಗಾಗಲೇ ನಡೆಯಬೇಕಾಗಿದ್ದ ಕರ್ನಾಟಕದ ಜಿಲ್ಲಾವಾರು ಉತ್ಸವಗಳನ್ನು ಕೊರೊನಾದಿಂದಾಗಿ ಮುಂದೂಡಲಾಗಿದೆ.

ಆತ್ಮೀಯರೇ, ಕರ್ನಾಟಕದಿಂದ ಉನ್ನತ ಶಿಕ್ಷಣಕ್ಕೆ ಬರುವ ಮಕ್ಕಳಿಗೆ ವಸತಿ ನಿಲಯ ಮಾಡಬೇಕೆಂಬುದು ನನ್ನ ಆಸೆ. ಇದರ ಬಗ್ಗೆ ಕರ್ನಾಟಕದ ಕೆಲವು ಮಂತ್ರಿಗಳೊಂದಿಗೆ ಮತ್ತು ಕೇಂದ್ರ ಮಂತ್ರಿಗಳ ಜತೆ ಸಂಪರ್ಕದಲ್ಲಿದ್ದು ಕರ್ನಾಟಕದಿಂದ ಸಹಾಯ ಮಾಡಲು ಈಗಾಗಲೇ ಪತ್ರವೂ ಸಹ ಬಂದಿದೆ. ಬರುವ ಬಜೆಟ್‌ನಲ್ಲಿ ಕರ್ನಾಟಕ ಸರ್ಕಾರದಿಂದ ನಾವು ಸಹಾಯ ಹಸ್ತ ಚಾಚಿದಲ್ಲಿ ಈ ಕಾರ್ಯವೂ ಸಹ ಪೂರ್ಣಗೊಳ್ಳಲಿದೆ. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ್ ಎಸ್. ಹೊರಟ್ಟಿರವರು ಈ ಕಾರ್ಯವನ್ನು ನೆರವೇರಿಸಲು, ಸಹಕರಿಸಲು ಒಪ್ಪಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ನಿಟ್ಟಿನಲ್ಲಿ ಈಗಾಗಲೇ ಪತ್ರವನ್ನು ಸಹ ಬರೆದಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘ ಮಾಡುತ್ತಿದ್ದರೆ,. ನಮ್ಮ ಆತ್ಮೀಯ ಮಿತ್ರರಾದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿ ಕುಮಾರ್‌ರವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾಗಿ ಜೊತೆಗೆ ದೆಹಲಿ ಕನ್ನಡ ಶಾಲೆಯ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದು ಉತ್ತಮ ಕೆಲಸ ಕಾರ್ಯಗಳು ನಡೆಯುತ್ತ ಬರುತ್ತಿವೆ. ಈ ಬಾರಿ ಶಾಲೆಯ ಕೊಠಡಿಗಳಿಗೆ ಉಚಿತವಾಗಿ ಟೈಲ್ಸ್ ಒದಗಿಸುವ ವ್ಯವಸ್ಥೆ ಮಾಡಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಇವರಿಗೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಅಧ್ಯಕ್ಷರಿಗೆ ಮತ್ತು ಆಡಳಿತ ಮಂಡಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಮ್ಮ ಹೆಮ್ಮೆಯ ಕನ್ನಡ ಶಾಲೆಯು ಪಕ್ಕದಲ್ಲೇ ಇರುವ ಸರ್ದಾರ್ ಪಟೇಲ್ ಸ್ಕೂಲ್‌ಗಿಂತಲೂ ಚೆನ್ನಾಗಿ ಅಭಿವೃದ್ಧಿ ಆಗಿ ಹೆಸರು ವಾಸಿಯಾಗಲಿ. ಹಿರಿಯರ ಸೇವೆಯನ್ನು ಸ್ಮರಿಸುತ್ತಾ ಕನ್ನಡ ಶಾಲೆಯನ್ನು ರಾಷ್ಟ್ರ ರಾಜಧಾನಿಯಲ್ಲಿ ಉಳಿಸೋಣ, ಬೆಳೆಸೋಣ. ಬರುವ ದಿನಗಳಲ್ಲಿ ಹೊಸ ಕಾರ್ಯಕಾರಿ ಸಮಿತಿ ಕನ್ನಡ ಶಾಲೆಗೆ ಆಯ್ಕೆ ಮಾಡಬೇಕಾಗಿದೆ. ಡಾ. ಎಂ.ಎಸ್. ಶಶಿ ಕುಮಾರ್‌ರಂತಹ ವ್ಯಕ್ತಿ ಇನ್ನೊಂದು ಬಾರಿ ಆಯ್ಕೆಯಾಗಿ ಇನ್ನೂ ಉತ್ತಮ ಕೆಲಸ ಕಾರ್ಯಗಳನ್ನು ನಿರ್ವಹಿಸಲೆಂದು ಕೇಳಿಕೊಳ್ಳುತ್ತೇನೆ.

ದೆಹಲಿ ಕನ್ನಡ ಶಾಲೆಗೆ ಇಬ್ಬರು ಶಿಕ್ಷಕರೂ ಸೇರಿದಂತೆ ಐದು ಸಿಬ್ಬಂದಿ ವರ್ಗ ಮತ್ತು ಉಪ ಪ್ರಾಂಶುಪಾಲರನ್ನು ಹೊಸದಾಗಿ ನೇಮಕಾತಿ ಮಾಡಲಾಗಿದೆ. ಇದಕ್ಕೆ ಶ್ರಮಿಸಿದ ಎಲ್ಲಾ ಪದಾಧಿಕಾರಿಗಳಿಗೆ ಮತ್ತು ಎಲೆ ಮರೆಕಾಯಿಯಂತೆ ಸಹಕಾರ ನೀಡಿದ ಶ್ರೀ ರಾಜೇಶ್ ಪ್ರಸಾದ್ (ಐಎಎಸ್) ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳು. ನಮ್ಮ ದೆಹಲಿ ಕನ್ನಡ ಶಾಲೆ ಇನ್ನೂ ಎತ್ತರಕ್ಕೆ ಬೆಳೆಯಲಿ ಹಾಗು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗರ ಪತಾಕೆ ಹಾರಿಸಲಿ ಎಂದು ಆಶಿಸುತ್ತೇನೆ.

***ಸಿ.ಎಂ. ನಾಗರಾಜ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯರೇ,

ಅಂತೂ ಇಂತೂ–ದೆಹಲಿಯ ಚಳಿಯ ಜೊತೆಗೆ ಕೊರೊನಾ ಸೋಂಕೂ ಕೂಡಾ ಗಣನೀಯವಾಗಿ ಇಳಿಕೆಯಾಗಿರುವುದು, ಸಮಾಧಾನಕರವಾದ ವಿಷಯ. ಅದರಂತೆಯೇ, ಕಳೆದೆರಡು ವರ್ಷಗಳಿಂದ ಮನೆಯಿಂದಲೇ ಆನ್‌ಲೈನ್ ಕ್ಲಾಸ್‌ಗಳಿಂದ ಬೇಸತ್ತ ಮಕ್ಕಳಿಗೆ ಶಾಲೆಗೆ ಹೋಗುವ ತವಕ ಮತ್ತು ಇತರೇ ನಾಗರೀಕರಿಗೆ ಸ್ವಾಭಾವಿಕತೆಯ ನೈಜ ಜೀವನದತ್ತ ಸಾಗುವ ತವಕ ಗರಿಕೆದರಿದೆ. ಇನ್ನು ದೆಹಲಿ ಕರ್ನಾಟಕ ಸಂಘ ಇದಕ್ಕೆ ಹೊರತಾದರೆ ಹೇಗೆ? ಹಾಗಾಗಿಯೇ ಅತೀ ಶೀಘ್ರದಲ್ಲಿ ನಮ್ಮ ಕಾರ್ಯಕ್ರಮಗಳ ಆಯೋಜನೆಗೆ ಚಾಲನೆ ನೀಡುತ್ತಿದ್ದೇವೆ.

ದೆಹಲಿ ಕರ್ನಾಟಕ ಸಂಘದ ಸದಸ್ಯತ್ವದ ಪಟ್ಟಿಯನ್ನು ಪರಿಷ್ಕರಿಸಲಾಗುತ್ತಿದೆ. ಸಂಘದ ಸದಸ್ಯರಾಗಿದ್ದು ದೆಹಲಿಯನ್ನು ಬಿಟ್ಟು ಹೋಗಿರುವ ಅಥವಾ ನಮ್ಮಿಂದ ದೂರವಾಗಿರುವ ಬಗ್ಗೆ ತಮಗೆ ತಿಳಿದಿದ್ದಲ್ಲಿ ಸಂಘಕ್ಕೆ ದಯವಿಟ್ಟು ಮಾಹಿತಿಯನ್ನು ನೀಡಿ. ಈಗಾಗಲೇ ಸಂಘ ಕಾರ್ಯಪ್ರವೃತ್ತವಾಗಿದೆ.

ಅಭಿಮತ ಪತ್ರಿಕೆಯ ಮುದ್ರಣ ಹಾಗೂ ಅಂಚೆ ವೆಚ್ಚ ಇವುಗಳ ಬಗ್ಗೆ ಗಮನಹರಿಸಿ ದೆಹಲಿಯಿಂದ ಕರ್ನಾಟಕಕ್ಕೆ ತೆರಳಿರುವ ಬಹಳಷ್ಟು ಸದಸ್ಯರ ದೆಹಲಿ ವಿಳಾಸಕ್ಕೆ ಅಭಿಮತ ಹೋಗುತ್ತಿರುವುದನ್ನು ಗಮನಿಸಿ, ಅಂತಹ ಸದಸ್ಯರ ಅಭಿಮತ ಪ್ರತಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ.

ಅಭಿಮತ ಪತ್ರಿಕೆಯ 'ಯುಗಾದಿ' ವಿಶೇಷಾಂಕ ಹೊರ ತರುವ ಯೋಚನೆಯಿದ್ದು, ಆಸಕ್ತ ಬರಹಗಾರರು ಯುಗಾದಿ ಹಬ್ಬ, ಯುಗಾದಿ ಸಂಸ್ಕೃತಿ, ಯುಗಾದಿ ವಿಶೇಷತೆ, ಉಡುಗೆ ತೊಡುಗೆ, ಆಹಾರ ಇತ್ಯಾದಿಗಳ ಬಗ್ಗೆ ಕವನ, ಲೇಖನ ಬರೆದು ಕಳುಹಿಸಲು ಈ ಮೂಲಕ ಕೋರುತ್ತೇನೆ.

**ಆರ್. ರೇಣುಕುಮಾರ್**
*ಪ್ರಧಾನ ಕಾರ್ಯದರ್ಶಿ*

## ಅಭಿನಂದನೆ

### U-15 ರಾಷ್ಟ್ರೀಯ ಬ್ಯಾಡ್ಮಿಂಟನ್ ರ್‍ಯಾಂಕಿಂಗ್‌ನಲ್ಲಿ 2ನೇ ಸ್ಥಾನಕ್ಕೇರಿದ ಹೊರನಾಡ ಕನ್ನಡ ಕುವರಿ ಅನ್ವೇಷ ಗೌಡ



2022 ರ ಜನವರಿ 9 ರಂದು ಹರಿಯಾಣದ ಪಂಚಕುಲದಲ್ಲಿ ನಡೆದ U-15 ರಾಷ್ಟ್ರೀಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್‌ನ ಫೈನಲ್‌ನಲ್ಲಿ ಕುಮಾರಿ ಅನ್ವೇಷ ಗೌಡ ಸ್ಪರ್ಧಿಸಿದ್ದರು.

ಫೈನಲ್ ಪಂದ್ಯದಲ್ಲಿ ಚಾಂಪಿಯನ್ ಆದ ನಿಶಾ ಕೌರ್ ಭಟೋಯೆ ವಿರುದ್ಧ 3 ಸೆಟ್‌ಗಳಲ್ಲಿ ಪರಾಜಿತರಾದ ಅವರು ಅತ್ಯುತ್ತಮ ಪ್ರದರ್ಶನ ನೀಡಿದ್ದು U-15 ಬಾಲಕಿಯರ ವಿಭಾಗದಲ್ಲಿ ಭಾರತದಲ್ಲಿ ನಂ. 2ರ ರ್‍ಯಾಂಕಿಂಗ್ ಗಳಿಸಲಿದ್ದಾರೆ ಎನ್ನುವುದು ಹೊರನಾಡ ಕನ್ನಡಿಗರಿಗೆ ಹೆಮ್ಮೆಯ ವಿಷಯ.

ದೆಹಲಿಯಲ್ಲಿ 8 ನೇ ತರಗತಿಯಲ್ಲಿ ಓದುತ್ತಿರುವ 13 ವರ್ಷ ವಯಸ್ಸಿನ ಕುಮಾರಿ ಅನ್ವೇಷ ಗೌಡ ಅವರು ಜ.9 ರಂದು ಪಂಚಕುಲದಲ್ಲಿ ನಡೆದ ಸಮಾರಂಭದಲ್ಲಿ ಹರಿಯಾಣದ ಮಾನ್ಯ ರಾಜ್ಯಪಾಲರಾದ ಶ್ರೀ ಬಂಡಾರು ದತ್ತಾತ್ರೇಯ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಅನಿತಾ ಮೊಹಾಂತಿ ಮತ್ತು ಮಾನ್ಯ ಡಿ.ಸಿ.ಪಿ. ಶ್ರೀ ಬಿ.ಎಲ್. ಸುರೇಶ್‌ರವರ ದ್ವಿತೀಯ ಪುತ್ರಿಯಾದ ಕುಮಾರಿ ಅನ್ವೇಷ ಗೌಡ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. □

**ಅಭಿಮತ ವರದಿ**

## ಕವನ

### ಹಸಿರು-ವರ ನೀಡುವಳು ಜಗದೇವಿ

ಭೂದೇವಿ ಹಸಿರುಟ್ಟು ನಿಂತಿಹಳು
ಜೀವರಾಶಿಗೆ ಆಹಾರ ಭಂಡಾರ ನೀಡಿಹಳು
ಸಂಭ್ರಮ ಸಡಗರಕೆ ಸುಗ್ಗಿ ತಂದಿಹಳು
ಜಗದೇವಿ ಜಗಕೆ ಸಂಕ್ರಮಣವ ಹರಸಿಹಳು
ಎಳ್ಳು-ಬೆಲ್ಲವ ಹಂಚಿ
ಕಬ್ಬು ಜಗ್ಗಿ ಸಿಹಿಯ ಹೀರಿ
ಬಂಧು-ಬಾಂದವರೆಲ್ಲರ ಹರಸಿ-ಹಾರೈಸಿ ಸೇರಿ ನಲಿವ
ಸಂಭ್ರಮ ತಂದ ಜಗದೇವಿಯ ವಂದಿಸುವ
ಬೆಳ್ಳಿ ರಥದಿ ಬರುವ ಸೂರ್ಯನು
ಹೊನ್ನ ಕಿರಣಗಳೊಂದಿಗೆ ಎಳೆಬಿಸಿಲ ಸೂಸಿ
ಕಿಲ-ಕಿಲ ನಗುವ, ಜೀವಜಗಕೆ ತಂದಿರುವ
ಸುಗ್ಗಿ-ಸಂಕ್ರಾತಿ ತಂದಾ ಜಗದೇವಿಯ ವಂದಿಸುತ ಸಂಭ್ರಮಿಸುವ.

**ನಮ್ರತಾ**



# ಕನ್ನಡದ ಕಟ್ಟಾಳು ಚಂದ್ರಶೇಖರ ಪಾಟೀಲ (ಚಂಪಾ)

ಡಾ. ಚಂದ್ರಶೇಖರ ಪಾಟೀಲರು (ಜೂನ್ 18, 1939–ಜನವರಿ 10, 2022) ತೀರಿಕೊಂಡಾಗ ಜನಪರ ಚಳುವಳಿಯ ಕೊಂಡಿಯೊಂದು ಕಳಚಿದಂತಾಯಿತು. 1980ರ ದಶಕದಲ್ಲಿ ಕಾಣಿಸಿಕೊಂಡ ಪ್ರಬಲವಾದ ಬಂಡಾಯ ಚಳುವಳಿಯಲ್ಲಿ ನಮಗೆಲ್ಲ ಅವರು ಮಾರ್ಗದರ್ಶನ ಮಾಡಿದ್ದರು. ಬರಗೂರು ರಾಮಚಂದ್ರಪ್ಪನವರ ಜೊತೆ ಸೇರಿಕೊಂಡು ಅವರು ಕರ್ನಾಟಕಕ್ಕೆ ಒಂದು ಹೊಸ ದಿಕ್ಕು ತೋರಿಸಿದರು. ಜಾತ್ಯತೀತವಾದ ದೃಷ್ಟಿಕೋನ, ಲಿಂಗಸಮಾನತೆ, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವ ಛಾತಿ, ಶಕ್ತಿ ರಾಜಕಾರಣದ ಮೋಸಗಳನ್ನು ಬಯಲಿಗೆಳೆಯುವುದು ಮೊದಲಾದ ಹಲವು ವಿಷಯಗಳನ್ನು ಬೀದಿಯಲ್ಲಿ ನಿಂತು ಅವರು ನಮಗೆ ಹೇಳಿಕೊಟ್ಟರು. ನಾವು ಕರೆದಲ್ಲಿಗೆ ಬಂದು ಭಾಷಣ ಮಾಡಿದರು. ನೆಲದಲ್ಲಿ ಕುಳಿತು ಘೋಷಣೆ ಕೂಗಿದರು. ಬಾವುಟ ಹಿಡಿದರು, ಪೋಸ್ಟರುಗಳನ್ನು ಬರೆದರು, ಗೋಡೆಗಳಲ್ಲಿ ಕವಿತೆ ಬರೆದರು. ನನ್ನಂಥ ಕೆಲವರಲ್ಲಿ ಏನಾದರೂ ಚಿಕ್ಕ ಪುಟ್ಟ ಪ್ರತಿಭಟನೆಯ ಕಿಚ್ಚು ಉಳಿಸಿಕೊಂಡಿದ್ದರೆ ಅದಕ್ಕೆ ಚಂಪಾ ಮುಖ್ಯ ಕಾರಣ. ಅವರು ನಿರ್ಭಿಡೆಯಿಂದ ತರುತ್ತಿದ್ದ ಸಂಕ್ರಮಣ ಪತ್ರಿಕೆ ಕರ್ನಾಟಕಕ್ಕೆ ಹೊಸ ಭಾಷೆಯನ್ನೇ ಕಲಿಸಿತು. ಅನಂತಮೂರ್ತಿ, ಲಂಕೇಶ, ರಾಮಚಂದ್ರ ಶರ್ಮ ಮೊದಲಾದ ಬೆಂಗಳೂರು ಕೇಂದ್ರಿತ ಸಾಹಿತಿಗಳನ್ನು ಟೀಕಿಸುತ್ತಾ ಸಾಹಿತ್ಯದ ಚರ್ಚೆಗಳನ್ನು ಚಂಪಾ ವಿಕೇಂದ್ರೀಕರಣ ಮಾಡಿದರು. ಸಂಕ್ರಮಣದ 'ಚಂಪಾ ಕಾಲಂ' ಹೇಳುವ ಚರಿತ್ರೆಯನ್ನು ಅಭ್ಯಸಿಸಿದರೆ ನಮಗೆ ಸಾಹಿತ್ಯದ ರಾಜಕೀಯಗಳ ಒಂದು ಚಿತ್ರ ದೊರೆಯುತ್ತದೆ. ಕವಿ, ನಾಟಕಕಾರ, ವಿಮರ್ಶಕ, ಭಾಷಣಕಾರ ಮತ್ತು ಕನ್ನಡ ಪರ ಹೋರಾಟಗಾರರಾಗಿ ಪಾಟೀಲರು ಸದಾ ನಮ್ಮ ನೆನಪಲ್ಲಿ ಉಳಿಯುತ್ತಾರೆ.

ಚಂಪಾ ಹುಟ್ಟಿದ್ದು ಉತ್ತರ ಕರ್ನಾಟಕದ ಹಾವೇರಿ ಜಿಲ್ಲೆಯ ಹತ್ತಿಮತ್ತೂರಿನಲ್ಲಿ. ಓದಿದ್ದು ಹತ್ತಿಮತ್ತೂರು–ಹಾವೇರಿಗಳಲ್ಲಿನ ಕನ್ನಡ ಶಾಲೆಗಳಲ್ಲಿ. 1956ರಲ್ಲಿ ಕರ್ನಾಟಕ ಕಾಲೇಜಿಗೆ ಸೇರಿ, 1960ರಲ್ಲಿ ಬಿ.ಎ. ಪೂರೈಸಿದರು. 1962ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಇಂಗ್ಲಿಷಿನಲ್ಲಿ ಎಂ.ಎ. ಪದವಿ ಪಡೆದರು. 1969ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದರು. ಇಂಗ್ಲಿಷ್ ಬೋಧಿಸುತ್ತಿದ್ದರೂ ಅವರು ಕನ್ನಡವನ್ನು ಬೆಳೆಸಿದರು. ಕನ್ನಡಕ್ಕಾಗಿ ಹೋರಾಡಿದರು. ಇಂಗ್ಲೆಂಡಿನ ಲೀಡ್ಸ್ ವಿವಿಯಲ್ಲಿ ಭಾಷಾ ವಿಜ್ಞಾನದಲ್ಲಿ ಪದವಿ ಗಳಿಸಿದರೂ ಭಾಷಾ ವಿಜ್ಞಾನಕ್ಕೆ ಆತುಕೊಳ್ಳುವ ಪಂಡಿತರಾಗಲೇ ಇಲ್ಲ ಚಂಪಾ. ಆದರೆ ಭಾಷೆಯ ಬಗೆಗಣ ತಮ್ಮ ತಿಳಿವಳಿಕೆಯನ್ನು ಹರಿತ ಮಾಡಿಕೊಂಡರು. 1980–83ರ ಅವಧಿಯಲ್ಲಿ ಧಾರವಾಡದ ಅಖಿಲ ಕರ್ನಾಟಕ ಕೇಂದ್ರ ಕನ್ನಡ ಕ್ರಿಯಾಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಗೋಕಾಕ್ ಚಳುವಳಿಗೆ ಪ್ರೇರಣೆ ನೀಡಿದರು. ಹೋರಾಟಕ್ಕೂ ಧುಮುಕಿದರು. ಗೋಕಾಕ್ ಚಳುವಳಿಯು ಅವರನ್ನು ನಾಡಿನ ಪ್ರಮುಖ ಹೋರಾಟಗಾರರೆಂದು ಗುರುತಿಸುವಂತೆ ಮಾಡಿತು. ತುರ್ತು ಪರಿಸ್ಥಿತಿಯಲ್ಲಿ ಜೈಲು ಸೇರಿದ್ದ ಅವರು ಸಾಹಿತಿಗಳ ಮೈ ಚಳಿ ಬಿಡಿಸಿದರು.

ಮಾತೃಭಾಷಾ ಮಾಧ್ಯಮ ಚಳುವಳಿಗೆ ಚಂಪಾ ಕೊಡುಗೆ ಬಹಳ ದೊಡ್ಡದು. ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡವೇ ಬೋಧನಾ ಮಾಧ್ಯಮವಾಗಿರಬೇಕು, ಬೇಕಿದ್ದರೆ ಇಂಗ್ಲಿಷನ್ನು ಪ್ರಾಥಮಿಕ 5ನೇ ತರಗತಿಯಿಂದ ಕಲಿಸಬೇಕು, ಕೇಂದ್ರ ಪಠ್ಯಕ್ರಮದ ಮಾಧ್ಯಮಗಳ ಶಾಲೆಗಳು ಕರ್ನಾಟಕದಲ್ಲಿದ್ದರೆ ಅವು ಕನ್ನಡವನ್ನು ಕಲಿಸಬೇಕು–ಎಂಬ ವಿಷಯಗಳ ಬಗ್ಗೆ ಚಂಪಾ ಅವರು ನಿರಂತರವಾಗಿ ಸರಕಾರದೊಂದಿಗೆ ಹೋರಾಡಿದರು. ಮಂತ್ರಿಗಳಿರಲಿ, ಅಧಿಕಾರಿಗಳಿರಲಿ, ಚಂಪಾ ಧ್ವನಿ ಯಾವತ್ತೂ ಕಂಪಿಸಿದ್ದು ನಾನು ಕಂಡಿಲ್ಲ. ದೊಡ್ಡ ದೊಡ್ಡವರು ಬಂದಾಗ ಅವರ ಸ್ವರ ಇನ್ನಷ್ಟು ಹೆಚ್ಚು ಏರುತ್ತಿತ್ತೇ ವಿನಾ ಕುಗ್ಗುತ್ತಿರಲಿಲ್ಲ. ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಕನ್ನಡ ಮಾಧ್ಯಮದಲ್ಲಿ ಶಾಲೆಯನ್ನು ನಡೆಸಲು ಅನುಮತಿ ಪಡೆದು ಆಂಗ್ಲಮಾಧ್ಯಮದಲ್ಲಿ ಶಾಲೆ ನಡೆಸುತ್ತಿದ್ದ ಸುಮಾರು 2215 ಶಾಲೆಗಳ ಮಾನ್ಯತೆಯನ್ನು ರದ್ದು ಮಾಡಿಸಿದರು. ಬೆದರದೆ, ಬೆಚ್ಚದೆ ಮುಂದುವರೆಯುವುದನ್ನು ನಾವೆಲ್ಲ ಅವರಿಂದ ಕಲಿಯಬೇಕು.

1979ರಲ್ಲಿ ಬಂಡಾಯ ಚಳುವಳಿಯು ಕನ್ನಡ ಸಾಹಿತ್ಯ ಪರಿಷತ್ತಿಗೆ ಬಹಿಷ್ಕಾರ ಹಾಕಿದರೂ ಚಂಪಾ ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ (ನವೆಂಬರ್ 2004 ರಿಂದ 2008ರವರೆಗೆ) ಸೇವೆ ಸಲ್ಲಿಸಿದರು. ಅವರ ನೇತೃತ್ವದಲ್ಲಿ ನಡೆದ ಶಿವಮೊಗ್ಗ ಸಾಹಿತ್ಯ ಸಮ್ಮೇಳನ ಅನೇಕ ಘಟನೆಗಳಿಗೆ ಸಾಕ್ಷಿಯಾಯಿತು. ಕಸಾಪವನ್ನು ಜನರ ಹತ್ತಿರ ಕೊಂಡೊಯ್ಯಲು ಅವರು ಮಾಡಿದ ಕೆಲಸಗಳು ಹಲವು. ಅದರಲ್ಲಿ ಅವರು ಚಾಲ್ತಿಗೆ ತಂದ ಶನಿವಾರದ ಪುಸ್ತಕಸಂತೆ ಕಾರ್ಯಕ್ರಮವೂ ಒಂದು. ಪ್ರತಿ ಶನಿವಾರವೂ ಪರಿಷತ್ತಿನ ಅಂಗಳದಲ್ಲಿ ಕನ್ನಡ ಪುಸ್ತಕ ಪ್ರಕಾಶಕರನ್ನು ಮತ್ತು ಮಾರಾಟಗಾರರನ್ನು ಆಹ್ವಾನಿಸಿ ರಿಯಾಯಿತಿ ದರದಲ್ಲಿ ಓದುಗರಿಗೆ ಪುಸ್ತಕಗಳು ದೊರೆಯುವಂತೆ ವ್ಯವಸ್ಥೆ ಮಾಡಿದರು. ಈ ಪುಸ್ತಕಸಂತೆಯಲ್ಲಿ ಹೊಸ ಪುಸ್ತಕ ಪ್ರಕಾಶಕರು ಮತ್ತು ಮಾರಾಟಗಾರರ ಜೊತೆಗೆ ಹಳೆ ಪುಸ್ತಕ ವ್ಯಾಪಾರಿಗಳೂ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದರು. ಅಷ್ಟೇ ಅಲ್ಲದೆ ತಮ್ಮ ಪುಸ್ತಕಗಳನ್ನು ತಾವೇ ಪ್ರಕಟಿಸುತ್ತಿದ್ದ ಲೇಖಕರೂ ಇಲ್ಲಿ ತಮ್ಮ ಪುಸ್ತಕಗಳನ್ನು ತಂದು ಮಾರುತ್ತಿದ್ದರು. ಅಪರೂಪದ ಮತ್ತು ಅಲಭ್ಯ ಗ್ರಂಥಗಳು ಇಲ್ಲಿ ಸಿಗುತ್ತಿದ್ದವು. ಇದರ ಜೊತೆಗೆ ಪರಿಷತ್ತಿನ ಮುಂಭಾಗದಲ್ಲಿ ಹಾಡು, ನೃತ್ಯ, ಭಾಷಣ ಇತ್ಯಾದಿ ಕಾರ್ಯಕ್ರಮಗಳೂ ನಡೆದವು. ಅವರ ಅಧಿಕಾರಾವಧಿ ಮುಗಿಯುತ್ತಿದ್ದಂತೆ ಅದು ಯಾಕೋ ನಿಂತು ಹೋಯಿತು. ಮೈಸೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಅವರು ಕನ್ನಡಕ್ಕಾಗಿ ಗುಡುಗಿದರು.

ಈ ಎಲ್ಲಾ ಕೆಲಸಗಳ ನಡುವೆಯೂ ಚಂಪಾ ನಾಲ್ಕು ಕಾಲ ಉಳಿಯುವಂಥ ಕೃತಿಗಳನ್ನು ರಚಿಸಿದರು. ಬಾನುಲಿ, ಮಧ್ಯಬಿಂದು, ಹೂವು ಹಣ್ಣು ತಾರೆ, ಓ ಎನ್ನ ದೇಶ ಬಾಂಧವರೇ, ಗುಂಡಮ್ಮನ ಹಾಡು ಮೊದಲಾದವು ಅವರ ಕವನ ಸಂಗ್ರಹಗಳು. ಕೊಡೆಗಳು, ಗೋಕರ್ಣದ



ಗೌಡಶಾನಿ, ನಳ ಕವಿಯ ಮಸ್ತಕಾಭಿಷೇಕ, ವಂದಿಮಾಗಧ ಅಪ್ಪ, ಕುಂಟ ಕುಂಟ ಕುರುವತ್ತಿ, ಗುರ್ತಿನವರು, ಟಿಂಗರ ಬುಡ್ಡಣ್ಣ, ಕತ್ತಲರಾತ್ರಿ, ಜಗದಂಬೆಯ ಬೀದಿ ನಾಟಕ, ಬುರಡಿ ಬಾಬನ ವಸ್ತ್ರಾಪಹರಣ ಪವಾಡ, ಮೊದಲಾದವು ಅವರ ಜನಪ್ರಿಯ ನಾಟಕಗಳು. ಬೇಂದ್ರೆ–ನಾನು ಕಂಡಂತೆ, ಕನ್ನಡ ಕನ್ನಡ ಬರ್ರಿ ನಮ್ಮ ಸಂಗಡ, ಚಂಪಾದಕೀಯ, ಮೊದಲಾದವು ಅವರ ಇತರ ಕೃತಿಗಳು. ಸಮಕಾಲೀನ ತುರ್ತುಗಳಿಗೆ ಅವರು ಸಾಹಿತ್ಯದ ಮೂಲಕ ಪ್ರತಿಕ್ರಿಯಿಸಿದ ರೀತಿಯ ಬಗ್ಗೆ ಇನ್ನಷ್ಟು ಅಧ್ಯಯನ ನಡೆಯಬೇಕಾಗಿದೆ.

ಚಂಪಾ ತಮ್ಮ ಹರಿತವಾದ ವ್ಯಂಗ್ಯಕ್ಕೆ ಹೆಸರಾದವರು. 'ಕನ್ನಡ ಕಾವ್ಯದ ಭೂತ ಭವಿಷ್ಯವ ಬಣ್ಣಿಸಿ ಹೇಳೋ ಗಾಂಪಾ; ನಮ್ಮ ಆದಿಕವಿ ಪಂಪಾ, ಗುರುವೇ ನಮ್ಮ ಅಂತ್ಯಕವಿ ಚಂಪಾ' ಅಂದು ತಮ್ಮನ್ನೇ ತಾವು ವಿನೋದ ಮಾಡಿಕೊಳ್ಳುತ್ತಿದ್ದರು. ಜೊತೆಗೆ ಅವರು ರಾಜ್ಯದಾದ್ಯಂತ ಮಾಡಿದ ಭಾಷಣಗಳಲ್ಲಿ ಬಳಸಿದ ವ್ಯಂಗ್ಯ ಮಾತುಗಳನ್ನು ಯಾರಾದರೂ ಇವತ್ತು ಸಂಗ್ರಹಿಸಬೇಕು.

ಮೈಸೂರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಹೊತ್ತು ಅವರು ಒಂದು ಮಾತು ಹೇಳಿದ್ದರು–'ತುಂಬ ಸಂಕಷ್ಟದ ಕಾಲಘಟ್ಟದಲ್ಲಿ ಈ ಗೌರವ ನನಗೆ ಒಲಿದು ಬಂದಿದೆ. ಭಿನ್ನಾಭಿಪ್ರಾಯಗಳನ್ನು ವಿರೋಧಿಸುವುದಷ್ಟೇ ಅಲ್ಲ; ಅಂಥ ದನಿಗಳನ್ನು ಗುಂಡುಗಳ ಮೂಲಕ ಶಾಶ್ವತವಾಗಿ ಇಲ್ಲವಾಗಿಸುವ ಅಸಹನೆಯ ವಾತಾವರಣದಲ್ಲಿ ನಾವಿದ್ದೇವೆ. ಸಾಹಿತಿಗಳು, ಪತ್ರಕರ್ತರು, ಸಂಶೋಧಕರ ಮೇಲೆ ದಾಳಿಗಳು ಹೆಚ್ಚುತ್ತಿವೆ. ಕನ್ನಡಿಗರು ಮೊದಲಿನಿಂದಲೂ ಸಹಿಷ್ಣುತೆಗೆ ಹೆಸರಾದವರು. ಸಾಂಸ್ಕೃತಿಕ ಬಹುತ್ವದ ಕುರಿತು ಅಚಲ ವಿಶ್ವಾಸಿಗಳು. ಹೀಗಾಗಿ ನಾವೀಗ ಕಠಿಣ ಸಂದೇಶಗಳನ್ನು ನೀಡಬೇಕಾಗಿದೆ. ಸಾಹಿತಿಗಳಿಗೆ ಈಗ ಹಿಂದೆಂದಿಗೂ ಇಲ್ಲದಷ್ಟು ಹೊಣೆಗಾರಿಕೆ ಇದೆ'.

ಇಂಥ ಜವಾಬ್ದಾರಿಯುತ ಮಾತುಗಳನ್ನು ಹೇಳಿದ ಚಂಪಾ ಇವತ್ತು ನಮ್ಮೊಡನಿಲ್ಲ. ಒಂದು ನಾಡಿನ ಜನಸಮುದಾಯದ ಒಳಿತಿನ ಬಗ್ಗೆ ನಿರಂತರವಾಗಿ ಮಾತಾಡಿಕೊಂಡು, ಹೋರಾಡಿಕೊಂಡು ಬಂದ ಚಂಪಾ ಇತಿಹಾಸದ ಹಿಂದೆ ಹೋದವರಲ್ಲ, ಇತಿಹಾಸವನ್ನು ನಿರ್ಮಿಸಿದವರು.

*ಡಾ. ಪುರುಷೋತ್ತಮ ಬಿಳಿಮಲೆ*

# "ಕನ್ನಡದ ಜನಪ್ರಿಯ ಕವಿ, ನಾಟಕಕಾರ, ಹೋರಾಟಗಾರ ಚಂಪಾ ಅವರಿಗೆ, ದೆಹಲಿ ಕರ್ನಾಟಕ ಸಂಘದಿಂದ ನುಡಿನಮನ ಕಾರ್ಯಕ್ರಮ"

ಇತ್ತೀಚೆಗೆ ಜ. 10 ರಂದು ನಿಧನರಾದ ಕನ್ನಡದ ಖ್ಯಾತ ಸಾಹಿತಿಗಳಾದ ಡಾ. ಚಂದ್ರಶೇಖರ ಪಾಟೀಲ (ಚಂಪಾ)ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ದೆಹಲಿ ಕರ್ನಾಟಕ ಸಂಘದ ವತಿಯಿಂದ ಆನ್‌ಲೈನ್ ಮೂಲಕ 16ನೇ ಜನವರಿ 2022 ರಂದು ಹಮ್ಮಿಕೊಳ್ಳಲಾಗಿದ್ದ ನುಡಿನಮನ ಕಾರ್ಯಕ್ರಮದಲ್ಲಿ ನೂರಾರು ದೆಹಲಿ ಕನ್ನಡಿಗರು, ಕನ್ನಡಿಗರ ಪ್ರತಿನಿಧಿಗಳು ಭಾಗವಹಿಸಿ, ವಿಚಾರ ಮಾಂತ್ರಿಕನಿಗೆ ತಮ್ಮ ನುಡಿನಮನವನ್ನು ಸಲ್ಲಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಬೆಂಗಳೂರಿನಿಂದ ಭಾಗವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾದ ನಾಡೋಜ ಡಾ. ಮಹೇಶ್ ಜೋಶಿಯವರು ಮಾತನಾಡಿ ಚಂಪಾ ಅವರು 02:11:2004 ರಿಂದ 30:04:2008 ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಇಪ್ಪತ್ತೆರಡನೆ ಅಧ್ಯಕ್ಷರಾಗಿದ್ದವರು. ಅವರು ಕುಳಿತ ಸ್ಥಾನದಲ್ಲಿ ಇವತ್ತು ನಾನು ಕುಳಿತುಕೊಂಡಿದ್ದೇನೆ. ಚುನಾವಣೆಯಲ್ಲಿ ಯಾರು ಪ್ರತಿಸ್ಪರ್ಧಿಗಳಿರಲ್ಲ, ಹೊರತಾಗಿ ಸಹ ಸ್ಪರ್ಧಿಗಳಾಗಿರುತ್ತಾರೆ ಎಂಬ ಆರೋಗ್ಯಯುತವಾದ ಚುನಾವಣೆ ಮೌಲ್ಯದ ಬಗ್ಗೆ ನನಗೆ ತಿಳಿಸಿಕೊಟ್ಟವರು ಚಂಪಾ. ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಗೆ ಸ್ಪರ್ಧಿಸಿದಾಗ ನನಗೆ ಸಂಪೂರ್ಣ ಬೆಂಬಲವನ್ನು ನೀಡಿದವರು ಚಂಪಾ, ಅವರು ಕಸಾಪ ಅಧ್ಯಕ್ಷ ಹುದ್ದೆಗೆ ಗೆದ್ದು ಬಂದಾಗ ಇದೊಂದು ಅಧಿಕಾರ ಅಲ್ಲ, ಇದೊಂದು ಜವಾಬ್ದಾರಿ. ಕನ್ನಡಿಗರು ಇದನ್ನು ನಿನಗೆ ಜವಾಬ್ದಾರಿಯಾಗಿ ಕೊಟ್ಟಿದ್ದಾರೆ, ಸರಿಯಾಗಿ ನಿಭಾಯಿಸು ಎಂದು ಆಶೀರ್ವಾದ ಮಾಡಿದ್ದರು. ಅವರು ಬರೆದ ಹಲವಾರು ಬರಹಗಳಲ್ಲಿ ಪ್ರಮುಖವಾಗಿ ಹೇಳಬೇಕೆಂದರೆ ನಾಟಕಗಳಾದ ಕುಂಟಾ ಕುಂಟಾ ಕುರುವತ್ತಿ, ಟಿಂಗರ ಬುಡ್ಡಣ್ಣ, ಕತ್ತಲರಾತ್ರಿ ಹಾಗೂ ಕೊಡೆಗಳು ಅವರ ಪ್ರಮುಖ ನಾಟಕಗಳಾಗಿದ್ದು, ಧಾರವಾಡದ ಸಾಹಿತ್ಯ ಯುಗದಲ್ಲಿ ಗಿರಡ್ಡಿ ಗೋವಿಂದರಾಜು, ಸಿದ್ದಲಿಂಗ ಪಟ್ಟಣಶೆಟ್ಟಿ ಮತ್ತು ಚಂದ್ರಶೇಖರ ಪಾಟೀಲ ಅವರು ತ್ರಿಮೂರ್ತಿಗಳಾಗಿ ಗುರುತಿಸಿಕೊಂಡವರು.

ಕನ್ನಡದ ಹಿರಿಯ ಜಾನಪದ ಸಾಹಿತಿಗಳು ಮತ್ತು ದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮಾಜಿ ಮುಖ್ಯಸ್ಥರಾದ ಡಾ. ಪುರುಷೋತ್ತಮ ಬಿಳಿಮಲೆಯವರು ನೀಡಿದ ಸಲಹೆಯಂತೆ ದಿವಂಗತ ಡಾ. ಚಂದ್ರಶೇಖರ ಪಾಟೀಲ್ ಅವರ ಸಮಗ್ರ ಸಾಹಿತ್ಯ ಸಂಪುಟವನ್ನು ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಬಿಡುಗಡೆಗೊಳಿಸಬೇಕು. ಚಂಪಾ ಅವರು ತಮ್ಮ ಕಾಲದಲ್ಲಿ ಪ್ರಾರಂಭಿಸಿದ್ದಂತಹ ಪುಸ್ತಕ ಸಂತೆಯನ್ನು ಪುನರ್ ಪ್ರಾರಂಭಿಸಬೇಕು ಎನ್ನುವ ಮನವಿಗಳಿಗೆ ತನ್ನ ಅವಧಿಯಲ್ಲಿ ಸಕಾರಾತ್ಮಕವಾಗಿ ಸ್ಪಂದಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡದ ಮತ್ತೊರ್ವ ಹಿರಿಯ ಸಾಹಿತಿಗಳು ಮತ್ತು ಚಂಪಾ ಅವರ ವಿದ್ಯಾರ್ಥಿಯಾಗಿ ನಂತರ ಸಹೋದ್ಯೋಗಿಯಾಗಿ ಕೆಲಸ ಮಾಡಿ, ನಿಕಟತೆಯನ್ನು ಹೊಂದಿದ್ದ ಡಾ. ರಾಜೇಂದ್ರ ಚೆನ್ನಿಯವರು ಮಾತನಾಡಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಚಂಪಾ ಅವರ ವಿದ್ಯಾರ್ಥಿಯಾಗಿ ಕಲಿಯುವದರ ಜೊತೆಗೆ ಶಿಕ್ಷಣ ಮುಗಿದ ಬಳಿಕ ಅವರ ಜೊತೆ ಕಿರಿಯ ಉಪನ್ಯಾಸಕನಾಗಿ, ಸೇವೆ ಸಲ್ಲಿಸುವ ಅವಕಾಶ ನನಗೆ ಸಿಕ್ಕಿತ್ತು. ಇವರ ಮನಸ್ಸು ಬಹಳ ಸೂಕ್ಷ್ಮವಾದ ಭಾವನೆಗಳಿಗೆ ಒಡನಾಡಿಯನ್ನು ಹೊಂದಿತ್ತು. ಸ್ನೇಹ ಸಂಬಂಧಗಳಲ್ಲಿ ಯಾವುದೇ ಏರಿಳಿತವಾಗದಿರುವಂತಹ ಬಾಂಧವ್ಯವನ್ನು ಅವರು ಬೆಸೆಯುತ್ತಿದ್ದರು. ಭಾರತದಲ್ಲಿ ಹಾಗೂ ಕನ್ನಡ ನಾಡಿನಲ್ಲಿ ಆಗುತ್ತಿದ್ದ ಪ್ರಕ್ಷುಬ್ಧ ಬದಲಾವಣೆಗಳಿಗೆ ಚಂಪಾ ಅವರು ಕೂಡ ಸಾಕ್ಷಿಯಾಗಿ ಸಹಭಾಗಿಯಾದವರು. ನವೋದಯ ಸಾಹಿತ್ಯ ಕಾಲ ಕ್ಷೀಣವಾಗಿ ನವ್ಯ ಸಾಹಿತ್ಯ ಬೆಳೆಯುವಾಗ ಅದಕ್ಕೆ ತಮ್ಮ ಸಂಕ್ರಮಣ ಪತ್ರಿಕೆಯ ಮೂಲಕ ಹೊಸ ವೇದಿಕೆಯನ್ನು ಹಾಕಿಕೊಟ್ಟರು. ಕನ್ನಡ ಸಾಹಿತ್ಯದ ಈ ಬದಲಾವಣೆಗೆ ಸೂಕ್ಷ್ಮ ವೇದನೆ ತೋರಿಸಿದವರು ಚಂಪಾರವರೆಂದು ತಮ್ಮ ಮಾತಿನುದ್ದಕ್ಕೂ ಅಗಲಿದ ಹಿರಿಯ ಸಾಹಿತಿಗಳ ಹತ್ತಾರು ಚಲನಾತ್ಮಕ ಕೆಲಸಗಳ ನಿದರ್ಶನವನ್ನು ಕೊಟ್ಟರು.



ಡಾ. ಚಂದ್ರಶೇಖರ ಪಾಟೀಲ ಅವರಿಗೆ 2017ನೇ ಸಾಲಿನ ಸಂಘದ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಅವರ ಬೆಂಗಳೂರಿನ ನಿವಾಸದಲ್ಲಿ ದಿನಾಂಕ 29.08.2020 ರಂದು ಪ್ರಧಾನ ಮಾಡಿದ ಸಂದರ್ಭ.

ಭಾಗವಹಿಸಿದ್ದ ಮತ್ತೊಬ್ಬ ಅತಿಥಿಗಳು, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು ಮತ್ತು ದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮಾಜಿ ಮುಖ್ಯಸ್ಥರೂ ಆದಂತಹ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ ಚಂಪಾ ಅವರ ಒಳಗೊಬ್ಬ ಕವಿ, ನಾಟಕಕಾರ, ಹೋರಾಟಗಾರನಿದ್ದ ಎನ್ನುತ್ತಾ, ಚಂಪಾ ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾಗಿದ್ದಾಗಿಂದ ಅವರು ಹೊರತಂದ ಸಾಹಿತ್ಯ ಲೇಖನಗಳ ಸಮಗ್ರ ಸಂಪುಟವನ್ನು ಕನ್ನಡ ಸಾಹಿತ್ಯ ಪರಿಷತ್ತು ಹೊರ ತರಬೇಕೆಂದು ಅವರು ವಿನಂತಿಸಿಕೊಂಡರು. ಕನ್ನಡ ಕಟ್ಟುವುದಕ್ಕಾಗಿ ಇಡೀ ಕರ್ನಾಟಕದಲ್ಲಿ ಓಡಾಡಿ, ಮಾಡಿದ ಭಾಷಣಗಳು ಮತ್ತು ಅವರ ಹೋರಾಟಗಳು ಐತಿಹಾಸಿಕವಾದದ್ದು. ನಾನು ಸುಳ್ಯದಲ್ಲಿದ್ದಾಗ ನನ್ನ ಆಹ್ವಾನದ ಮೇರೆಗೆ ಎರಡು ಸಾರಿ ಅಲ್ಲಿಗೆ ಬಂದು ಭಾಷಣ ಮಾಡಿದ್ದರು. ಎಪ್ಪತ್ತರ ದಶಕದಲ್ಲಿ ಅವರು ಲೋಹಿಯಾವಾದಿಗಳ ಕಾರ್ಯಕ್ರಮ, ಅಂಬೇಡ್ಕರರ ಕಾರ್ಯಕ್ರಮ ಎನ್ನದೆ ಎಲ್ಲ ಕಾರ್ಯಕ್ರಮಗಳಿಗೆ ಭಾಗವಹಿಸುತ್ತಿದ್ದು ಜನಪರ ನಿಲುವನ್ನು ಹೊಂದಿದ್ದರು. ಬೆಂಗಳೂರು ರಾಜ್ಯದ ಕೇಂದ್ರವಾಗಿರುವುದರಿಂದ ಎಪ್ಪತ್ತು ಎಂಭತ್ತರ ದಶಕದಲ್ಲಿ ಪಿ. ಲಂಕೇಶ್, ಗಿರೀಶ್ ಕಾರ್ನಾಡ್, ಡಾ. ಯು.ಆರ್. ಅನಂತಮೂರ್ತಿ ಅವರಿಂದ ಅನೇಕ ಸಾಹಿತ್ಯಿಕ ಚರ್ಚೆಗಳು ಕೇವಲ ಬೆಂಗಳೂರಿಗೆ ಕೇಂದ್ರಿತವಾಗಿತ್ತು. ಇದನ್ನು ತಮ್ಮ ಸಂಕ್ರಮಣ ಪತ್ರಿಕೆಯ ಮೂಲಕ ಅವರು ಧಾರವಾಡಕ್ಕೆ ವರ್ಗಾಯಿಸಿ ಧಾರವಾಡದಲ್ಲಿಯೂ ಕೂಡ ಸಾಹಿತ್ಯಿಕ ಚರ್ಚೆಗಳು ವಿಚಾರ ಗೋಷ್ಠಿಗಳು ನಡೆಯುವಂತೆ ಮಾಡಿದವರು ಚಂಪಾರವರು. ಸೂಕ್ಷ್ಮವಾಗಿ ಅವರ ಚಟುವಟಿಕೆಗಳನ್ನು ನೋಡಿದಾಗ ಅವರು ನಮ್ಮ ಧ್ವನಿಯನ್ನು ಎತ್ತುತ್ತಿದ್ದಾರೆ ಎಂದು ಭಾಸವಾಗುತ್ತಿತ್ತು. ಬಂಡಾಯ ಸಾಹಿತ್ಯದ ಪ್ರಮುಖರಾಗಿದ್ದ ಬರಗೂರು ರಾಮಚಂದ್ರಪ್ಪನವರು ಮತ್ತು ಚಂಪಾ ಅವರು ಅವಳಿ ಜವಳಿಯಂತೆ ಇದ್ದವರು. ಆದರೆ ಬಂಡಾಯ ಆಸಕ್ತ ಸಾಹಿತಿಗಳು ಹೆಚ್ಚಾಗಿ ಚಂಪಾ ಅವರ ಹಿಂದೆ ಬಿದ್ದು ಅವರ ಸಾಹಿತ್ಯವನ್ನು ಅವರ ನಿಲುವುಗಳನ್ನು ಇಷ್ಟಪಡಲು ಪ್ರಾರಂಭಿಸಿದರು. ಅವರು ತಂದಂತಹ ಸಂಕ್ರಮಣ ಪತ್ರಿಕೆಯ ಮೂಲಕ ಹಲವಾರು ಬರಹಗಾರರು ಬೆಳೆಯಲು ಅನುಕೂಲವಾಯಿತು. ಇವತ್ತು ಒಂದು ಪತ್ರಿಕೆಯನ್ನು ನಡೆಸಿಕೊಂಡು ಹೋಗುವುದು ಬಹಳ ಕಷ್ಟದ ಕೆಲಸ ಆದರೆ ಆರ್ಥಿಕವಾಗಿ ಬಹಳ ಸಬಲವಾಗಿಲ್ಲದಂತಹ ಸಮಯದಲ್ಲಿ ಚಂಪಾ ಅವರು ಸುದೀರ್ಘವಾಗಿ ತಮ್ಮ ಪತ್ರಿಕೆಯನ್ನು ಮುಂದುವರಿಸಿಕೊಂಡು ಬಂದರು. ತಮ್ಮ ಪತ್ರಿಕೆಗಳಲ್ಲಿ ವಾದ ವಾಗ್ವಾದಗಳಿಗೆ, ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟರು. ಹೀಗೆ ಹಲವಾರು ರೀತಿಯಲ್ಲಿ ಕನ್ನಡಕ್ಕಾಗಿ ಚಂಪಾ ಅವರು ಸಲ್ಲಿಸಿದ ಸೇವೆ, ಬರಹ ಹೋರಾಟಗಳನ್ನು ನಾವು ನೆನಪಿಸಿಕೊಳ್ಳದೆ ಹೋದರೆ ಜಡವಾಗಬಹುದೆನಿಸುವುದು ಎಂದು ಮಾರ್ಮಿಕವಾಗಿ ಚಂಪಾ ಅವರ ಕೆಲವು ಘಟನೆಗಳನ್ನು ಉಲ್ಲೇಖಿಸಿ ತಮ್ಮ ಗೌರವಪೂರ್ವಕ ನುಡಿನಮನ ಸಲ್ಲಿಸಿದರು.

ಚಂಪಾ ಅವರ ವ್ಯಕ್ತಿತ್ವಗಳನ್ನು ಮೆಲುಕು ಹಾಕಿದ ಹಿರಿಯ ಸಾಹಿತಿಗಳು ಮತ್ತು ಜೆ.ಎನ್. ಯು.ನ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್.

ಎಸ್. ಶಿವಪ್ರಕಾಶ್ ಅವರು ಮಾತನಾಡಿ ಚಂಪಾ ಒಬ್ಬ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದರು, ಅವರು ಸಾಮಾಜಿಕ ಹೋರಾಟ ಮತ್ತು ಸಾಹಿತ್ಯಗಳೆರಡನ್ನು ಸಮಸಮನಾಗಿ ನಡೆಸಿದರು. ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ, ಒಬ್ಬ ಅತ್ಯಂತ ಅಲಕ್ಷ್ಯಕ್ಕೆ ಒಳಗಾದಂತಹ ಕವಿಗಳಾಗಿದ್ದರು. ಕನ್ನಡ ಸಾಹಿತ್ಯದಲ್ಲಿ ಮನಸ್ಸನ್ನ ಬಡಿದೆಬ್ಬಿಸುವಂಥಹ ಗದ್ಯವನ್ನು ಬರೆಯುವ ಶೈಲಿಯನ್ನು ಹೊಂದಿದವರು ಚಂಪಾ. ಅವರು ಬರೆದ ಗದ್ಯಗಳು, ವಿಚಾರಗಳು ಹಲವಾರು ಚರ್ಚೆಗಳಿಗೆ ಸ್ವಾಗತ ಮಾಡಿಕೊಡುತ್ತಿದ್ದವು ಅಂತಹ ಸಂವಾದಯುತ ಸಾಹಿತ್ಯವನ್ನು ಚಂಪಾ ಬರೆಯುತ್ತಿದ್ದರು. ಹನ್ನೆರಡನೇ ಶತಮಾನದ ವಚನಕಾರರ ಸಾಮಾಜಿಕ ಬದ್ಧತೆಯ ಸಾಹಿತ್ಯ ಕಂಡಿದ್ದು ಚಂಪಾ ಅವರ ನವ್ಯ ಸಾಹಿತ್ಯ ವಿಚಾರಗಳಲ್ಲಿ. ಚಂಪಾ ಅವರು ತಮ್ಮ ಸಾಹಿತ್ಯದ ಮೂಲಕ ವಚನಕಾರರ ವಿಚಾರಗಳಿಗೆ ಹತ್ತಿರವಾಗಲು ಕಾರಣ, ಅವರು ತಮ್ಮ ಸಾಹಿತ್ಯದಲ್ಲಿ ನಡೆ ನುಡಿ ಆಚಾರ ವಿಚಾರಗಳನ್ನು ಅಳವಡಿಸಿಕೊಂಡಿದ್ದು. ಸಾಹಿತ್ಯಿಕವಾಗಿ ವೈಷಮ್ಯವಿದ್ದರೂ ಕೂಡ ವೈಯಕ್ತಿಕವಾಗಿ ಎಲ್ಲರನ್ನು ಪ್ರೀತಿ ಮಾಡುವಂತಹ ವ್ಯಕ್ತಿತ್ವ ಅವರದ್ದಾಗಿತ್ತು ಎಂದು ಚಂಪಾ ಅವರ ನಿಕಟ ಬರಹ, ಭಾಷೆ, ವ್ಯಕ್ತಿತ್ವಗಳನ್ನು ಸ್ಫುಟವಾಗಿ ವಿವರಿಸಿ ಅವರ ಅಗಲಿಕೆಗೆ ಕಂಬನಿ ಮಿಡಿದರು.

ಜೊತೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರು, ಜೆ.ಎನ್.ಯು.ನ ಅಂತರ ರಾಷ್ಟ್ರೀಯ ಕಾನೂನು ವಿಭಾಗದ ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಜಿ. ಹೆಗಡೆಯವರು ಮಾತನಾಡಿ ದೆಹಲಿ ಕರ್ನಾಟಕ ಸಂಘವು ಮೂರು ವರ್ಷಗಳ ಹಿಂದೆ ಸಾಹಿತ್ಯ ಕ್ಷೇತ್ರಕ್ಕೆ ಇವರು ಸಲ್ಲಿಸಿದ ಕೊಡುಗೆಗಾಗಿ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಸಂಘದ ಸಾಹಿತ್ಯಿಕ ಸಮಿತಿ ತೆಗೆದುಕೊಂಡ ನಿರ್ಧಾರದ ಮೇರೆಗೆ ಚಂಪಾ ಅವರಿಗೆ ನೀಡಲು ಘೋಷಿಸಿತು. ದೆಹಲಿ ಕರ್ನಾಟಕ ಸಂಘವು ದೆಹಲಿಯಲ್ಲೊಂದು ಕನ್ನಡದ ವಿಚಾರ ಗೋಷ್ಠಿಯನ್ನು ಆಯೋಜಿಸಿ, ಚಂದ್ರಶೇಖರ ಪಾಟೀಲ ಅವರನ್ನು ಅತಿಥಿಗಳನ್ನಾಗಿ ಕರೆಸಿ ಅವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲು ನಿರ್ಧರಿಸಿತ್ತು ಆದರೆ ಆರೋಗ್ಯ ಕಾರಣಗಳಿಂದಾಗಿ ಅವರನ್ನು ದೆಹಲಿಗೆ ಕರೆಯಿಸಿ ಸನ್ಮಾನಿಸಲು ಸಾಧ್ಯವಾಗದ ಕಾರಣ ನಮ್ಮ ಈಗಿನ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಬೆಂಗಳೂರಿನ ಚಂಪಾ ಅವರ ಮನೆಗೆ ಹೋಗಿ ಆ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿ ಬಂದಿದ್ದರು. ಆ ಸಮಯದಲ್ಲಿ ನನಗೆ ಅವರೊಂದಿಗೆ ದೂರವಾಣಿಯ ಮೂಲಕ ಮಾತನಾಡಲು ಸಿಕ್ಕ ಹತ್ತು ನಿಮಿಷಗಳ ಸಮಯ ಒಬ್ಬ ಸಾಹಿತ್ಯಾಸಕ್ತಿಯನ್ನು ಹೊಂದಿದ್ದ ನನಗೆ ಅತಿ ಖುಷಿಯನ್ನುಂಟು ಮಾಡಿತ್ತು. ಈ ಪ್ರಶಸ್ತಿಯನ್ನು ಅವರಿಗೆ ನೀಡುವುದರ ಮೂಲಕ ದೆಹಲಿ ಕರ್ನಾಟಕ ಸಂಘದ ಹೆಮ್ಮೆ ಇನ್ನೂ ಹೆಚ್ಚಾಗುವಂತೆ ಆಯಿತು. ಚಂಪಾ ಅವರು ಕನ್ನಡ ಕಲಿಕೆಗೆ ಮಕ್ಕಳಿಗೆ ಕೊಟ್ಟಂಥಹ ಒತ್ತು, ಆಸಕ್ತಿ ಬಹಳ ಒಪ್ಪುವಂಥಹದಾಗಿತ್ತು ಎಂದು ಅಗಲಿದ ಸಾಹಿತಿಗಳ ಬಗ್ಗೆ ಹೆಮ್ಮೆಯ ಮಾತುಗಳನ್ನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ದೆಹಲಿಯಲ್ಲಿ ಕೊರೊನಾ ತೀವ್ರವಾಗಿ ಏರಿಕೆಯಾಗುತ್ತಿರುವ ಕಾರಣ ಈ ಕಾರ್ಯಕ್ರಮವನ್ನು ಆನ್‌ಲೈನ್ ವೇದಿಕೆಯ ಮೂಲಕ ಮಾಡುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಕನ್ನಡ ಸಾಹಿತ್ಯ ಲೋಕದ ದಿಗ್ಗಜರಾದ ಡಾ. ಚಂದ್ರಶೇಖರ ಪಾಟೀಲ ಅವರು ನಮ್ಮನ್ನೆಲ್ಲ ಅಗಲಿದ್ದು ನಮಗೆ ಮತ್ತು ಸಾಹಿತ್ಯ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. 2022 ರ ಹೊಸ ವರ್ಷದ ದೆಹಲಿ ಕರ್ನಾಟಕ ಸಂಘದ ಮೊದಲ ಕಾರ್ಯಕ್ರಮವು, ಸಂಘವು ಪ್ರಾರಂಭವಾಗಿ 75 ವರ್ಷಗಳ ಅಮೃತ ಮಹೋತ್ಸವದ ಖುಷಿಯಲ್ಲಿ ವಿಜೃಂಭಣೆಯಿಂದ ಜರುಗಬೇಕಾಗಿತ್ತು ಆದರೆ ಕೊರೊನಾ ಸಂದರ್ಭವಿರುವುದರಿಂದ ಹಾಗೂ ಕನ್ನಡದ ಹಿರಿಯ ಸಾಹಿತಿಗಳು ನಮ್ಮನ್ನು ಅಗಲಿರುವುದರಿಂದ ಬಹಳ ದುಃಖದ ಸನ್ನಿವೇಶ ನಿರ್ಮಾಣವಾಗಿದೆ ಎಂದು ಶೋಕ ವ್ಯಕ್ತಪಡಿಸಿ, ಬರುವ ದಿನಗಳಲ್ಲಿ ಕೊರೊನಾ ಕಡಿಮೆಯಾದ ಬಳಿಕ, ಅಮೃತ ಮಹೋತ್ಸವ ಆಚರಣೆಯ ಎಲ್ಲ ಕಾರ್ಯಕ್ರಮಗಳನ್ನು ಸಂತಸದಿಂದ ಆಯೋಜನೆ ಮಾಡಲಾಗುವುದು ಎಂದರು.

ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಶಿವಪ್ಪ ಎಂ ಅವರು ಕಾರ್ಯಕ್ರಮವನ್ನು ಉತ್ತಮವಾಗಿ ನಿರೂಪಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಆರ್. ರೇಣುಕುಮಾರ್ ಅವರು ಕಾರ್ಯಕ್ರಮವನ್ನು ಸುಸೂತ್ರವಾಗಿ ಸಂಯೋಜಿಸುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಸರ್ವ ಸದಸ್ಯರಿಗೆ, ಅತಿಥಿಗಣ್ಯರಿಗೆ ವಂದನೆಗಳನ್ನು ಸಲ್ಲಿಸಿದರು. □

***ಅಭಿಮತ ವರದಿ***

# ದೆಹಲಿ ಕನ್ನಡ ಶಾಲೆಯಲ್ಲಿ 'ಚಂಪಾ ನುಡಿನಮನ' ಕಾರ್ಯಕ್ರಮ

"ಎಲ್ಲೋ ಹುಟ್ಟಿ ಎಲ್ಲೋ ಬೆಳೆದು ಒಳಗೊಳಗೇ ಹರಿಯುವವಳು ಜೀವ ಹಿಂಡಿ ಹಿಪ್ಪೆಮಾಡಿ ಒಳಗೊಳಗೇ ಕೊರೆಯುವವಳು ಸದಾ ಗುಪ್ತಗಾಮಿನಿ ನನ್ನ ಶಾಲ್ಮಲಾ" ಸುಮಧುರ ಹಾಡಿನ ಕವಿ ಡಾ.ಚಂದ್ರಶೇಖರ ಪಾಟೀಲಅವರು ಇನ್ನಿಲ್ಲ. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಜನವರಿ ಹತ್ತನೇ ತಾರೀಕು ಸೋಮವಾರದಂದು ಅಗಲಿದ ಕನ್ನಡದ ಕವಿ, ಪ್ರಾಧ್ಯಾಪಕ, ನಾಟಕಕಾರ, ಲೇಖಕ, ವಿಚಾರವಾದಿ, ವಿಡಂಬನಕಾರ, ಕನ್ನಡದ ಕಟ್ಟಾಳು, ಗೋಕಾಕ್ ಚಳವಳಿಯ ರೂವಾರಿ ಡಾ. ಚಂದ್ರಶೇಖರ ಪಾಟೀಲ್ (ಚಂಪಾ) ಅವರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಲುವಾಗಿ ಜನವರಿ 12ನೇ ತಾರೀಕು ಬುಧವಾರ ಸಂಜೆ 5 ಗಂಟೆಗೆ 'ಚಂಪಾ ನುಡಿನಮನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಶಾಲೆಯ ವ್ಯವಸ್ಥಾಪಕರು ಹಾಗು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಶಶಿ ಕುಮಾರ್ ಅವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಡಾ. ಚಂದ್ರಶೇಖರ ಪಾಟೀಲ ಅವರು ನವೋದಯ ಸಾಹಿತ್ಯದಲ್ಲಿ ಕೃಷಿ ಆರಂಭಿಸಿದ್ದರೂ ಪೂರ್ಣವಾಗಿ ಒಪ್ಪಿರಲಿಲ್ಲ, ನವ್ಯದ ಹಾದಿಯಲ್ಲೂ ಹೆಚ್ಚು ಸಾಗಲಿಲ್ಲ, ದಲಿತ ಬಂಡಾಯದಲ್ಲಿ ಸಂಪೂರ್ಣ ಮಗ್ನರಾಗಿರಲಿಲ್ಲ. ಸಾಹಿತ್ಯದಲ್ಲಿ ದಲಿತ-ಬಲಿತ-ಕಲಿತ ಅಂತೆಲ್ಲಾ ವರ್ಗ ಮಾಡೋದಕ್ಕಾಗದು ಎಂಬುದು ಅವರ ದೃಢನಿಶ್ಚಯವಾಗಿತ್ತು. ಯಾರನ್ನೂ ಪೂಜಾರ್ಹ ಸ್ಥಾನಕ್ಕೂ ಏರಿಸಲಿಲ್ಲ. ಬೇಂದ್ರೆಗೆ ನಿನ್ನ ಪಾದದ ಧೂಳು ನನ್ನ ಹಣೆ ಮೇಲೆ ವಿಭೂತಿ ಆಗಲಿ ಆದರೆ ಅದು ಕಣ್ಣಿಗೆ ಬೀಳದಿರಲಿ ಎಂದು ಕಾವ್ಯಾತ್ಮಕವಾಗಿ ಹೇಳಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಡಾ. ಕೆ.ವಿ. ಮುದ್ದವೀರಪ್ಪನವರು ತಮ್ಮ ಭಾಷಣದಲ್ಲಿ ಡಾ. ಚಂದ್ರಶೇಖರ ಪಾಟೀಲ್ ಅವರು 'ಸಂಕ್ರಮಣ' ಪತ್ರಿಕೆಯನ್ನು ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ ಇವರುಗಳೊಡನೆ ಸೇರಿ ಪ್ರಾರಂಭಿಸಿದರೂ, ಇದು ಹೇಗೆ ನವ್ಯ, ದಲಿತ ಬಂಡಾಯ ಸಾಹಿತ್ಯ ಚಳುವಳಿ ಯುವ ಬರಹಗಾರರಿಗೆ ವೇದಿಕೆಯಾಗಿ ಪರಿಣಮಿಸಿತು ಎಂಬುದನ್ನು ತಿಳಿಸಿದರು. ಚಂಪಾ ಅವರ ಕನ್ನಡಪರ ಹೋರಾಟದ ಬಗ್ಗೆ ಹೇಳುತ್ತಾ ಗಡಿನಾಡ ಕನ್ನಡಿಗರ ಸಮಸ್ಯೆಗಳ ಪರಿಹಾರಕ್ಕಾಗಿ ಅಧ್ಯಕ್ಷರ ಪುಸ್ತಕ ನಿಧಿಯನ್ನು ಪ್ರಾರಂಭಿಸಿದ್ದು ಕನ್ನಡ ಭಾಷೆಗೂ ಶಾಸ್ತ್ರೀಯ ಸ್ಥಾನಮಾನ ದೊರೆಯುವಂತೆ ಹೋರಾಟ ನಡೆಸಿದರು ಎಂಬುದನ್ನು ತಿಳಿಸಿದರು. ಹಾಗೆಯೇ ಅಂತರ್ಜಾಲ ಸೌಲಭ್ಯ ಗಣಕ ಸಮ್ಮೇಳನದ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸಿದ್ದರ ಬಗ್ಗೆ ತಿಳಿಸಿದರು. ಗೋಕಾಕ್ ಚಳುವಳಿಯಲ್ಲಿ ಸ್ವತಃ ಚಂಪಾ ಅವರು 25 ದಿನ ಜೈಲುವಾಸ ಅನುಭವಿಸಿದರ ಬಗ್ಗೆ ತಿಳಿಸಿದರು. ಕನ್ನಡ ನಾಡುನುಡಿ ಸಂಸ್ಕೃತಿಯ ರಕ್ಷಣೆಗಾಗಿ ನಿರಂತರವಾಗಿ ಹೋರಾಡಿದ ಚಂಪಾರವರು ಪುಸ್ತಕ ಸಂತೆಯನ್ನು ಪ್ರತಿ ಶನಿವಾರ ಸಂಜೆ ಏರ್ಪಡಿಸಿದ್ದರು. ಈ ಸಂತೆಯಲ್ಲಿ ಹಲವಾರು ಪುಸ್ತಕಗಳು ಜನಸಾಮಾನ್ಯರಿಗೆ ಕೈಗೆಟುಕುವ ಬೆಲೆಯಲ್ಲಿಯೂ ಹಲವಾರು ಅಪರೂಪದ ಕೃತಿಗಳು ಎಲ್ಲರಿಗೂ ಸಿಗುವಂತೆ ಮಾಡಿದರು. ಅದರ ಜೊತೆಗೆ ಉನ್ನತ ಮಟ್ಟದ ಸಮಾಲೋಚನೆಗಳನ್ನು ಸಹ ಅಲ್ಲಿ ಏರ್ಪಡಿಸಲಾಗುತ್ತಿತ್ತು. ಇಂತಹ ಅನೇಕ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಕನ್ನಡಕ್ಕೆ ತನ್ನದೇ ಆದಂತಹ ಸ್ಥಾನಮಾನ ದೊರೆಕಿಸಿಕೊಡುವಲ್ಲಿ ಚಂಪಾ ಅವರ ಪಾತ್ರ ಬಹಳ ಔನತ್ಯವಾಗಿತ್ತು ಎಂಬುದನ್ನು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ತಮ್ಮ ಹಾಗೂ ಚಂದ್ರಶೇಖರ ಪಾಟೀಲ್‌ರವರ ಒಡನಾಟ, ದೆಹಲಿ ಕರ್ನಾಟಕ ಸಂಘಕ್ಕೆ ಚಂಪಾ ಅವರು ಬಂದಾಗ ಅವರೊಂದಿಗೆ ಆಡಿದ ಮಾತುಕತೆಯನ್ನು ಸ್ಮರಿಸುತ್ತಾ ಕನ್ನಡ ನಾಡುನುಡಿಯ ಬಗ್ಗೆ ಅವರಿಗಿದ್ದ ಒಲವು ಕನ್ನಡ ಮಾಧ್ಯಮದಲ್ಲಿ ಓದಿದವರ ಚಿಂತನಾಲಹರಿಯ ಬಗ್ಗೆ ಮಾತನಾಡಿದರು. ಕರ್ನಾಟಕದ ನಮ್ಮ ಮೆಟ್ರೋದಲ್ಲಿ ಹಿಂದಿ ನಾಮಫಲಕ ಬೇಡ ಎಂದು ತಿಳಿಸಿದ್ದರು ಎಂಬುದನ್ನು ಇಲ್ಲಿ ಉಲ್ಲೇಖಿಸಿದ್ದರು.

ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿ ಗಣ್ಯರನ್ನು ಸ್ವಾಗತಿಸುತ್ತಾ, ಚಂದ್ರಶೇಖರ ಪಾಟೀಲ್ ಅವರು ಸಂವಿಧಾನದ ಮೂಲತತ್ವಗಳ ಬಗ್ಗೆ ಅಚಲ ನಂಬಿಕೆ ಉಳ್ಳವರು, ವಿಮರ್ಶಾತ್ಮಕ ಜಾಗೃತಿ ನಾಡುನುಡಿಯ ಪ್ರಜ್ಞೆ, ವಾಸ್ತವಿಕತೆ ಅವರ ಜೀವನದ ಹಾದಿಯ ಗುರುತುಗಳು ಎಂಬುದನ್ನು ತಿಳಿಸಿದರು. ಅಂತರ್ಜಾಲದ ಮೂಲಕ ನಡೆದ ಚಂಪಾ ನುಡಿನಮನ ಕಾರ್ಯಕ್ರಮವು ಶಾಲಾ ಶಿಕ್ಷಕ ವೃಂದ, ಆಡಳಿತ ಸಮಿತಿ, ಪೋಷಕರು ಹಾಗೂ ಮಕ್ಕಳೊಂದಿಗೆ ಶ್ರದ್ಧಾಪೂರ್ವಕವಾಗಿ ಜರುಗಿತು. ಕಾರ್ಯಕ್ರಮದ ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶಾಲೆಯ ಶಿಕ್ಷಕಿಯಾದ ಎಂ.ಎಸ್. ಲಾವಣ್ಯ ನಿರ್ವಹಿಸಿದರೆ, ಮುಖ್ಯ ಅತಿಥಿಗಳ ಪರಿಚಯವನ್ನು ಶಾಲೆಯ ಹನ್ನೆರಡನೇ ತರಗತಿ ವಿದ್ಯಾರ್ಥಿನಿಯಾದ ಕು. ಸಿ.ಬಿ. ವೈಷ್ಣವಿ ಅವರು ನಿರ್ವಹಿಸಿದರು. □

***ಎಂ.ಎಸ್. ಲಾವಣ್ಯ***

# "ಕರ್ನಾಟಕ : ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು" ಮನಸೂರೆಗೊಂಡ ರಾಜ್ಯದ ಸ್ತಬ್ಧಚಿತ್ರ



2022ರ ಜನವರಿ 26ರಂದು ನವದೆಹಲಿಯ ರಾಜಪಥದಲ್ಲಿ ನಡೆದ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಕರ್ನಾಟಕ : ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು ಎಂಬ ವಿಷಯಾಧಾರಿತ ರಾಜ್ಯದ ಸ್ತಬ್ಧಚಿತ್ರ ಎಲ್ಲರ ಗಮನ ಸೆಳೆಯಿತು.

ಈ ಬಾರಿ ಆಯ್ಕೆಯಾದ 12 ರಾಜ್ಯಗಳ ಸ್ತಬ್ಧಚಿತ್ರಗಳಲ್ಲಿ ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಏಕೈಕ ಸ್ತಬ್ಧಚಿತ್ರ ನಮ್ಮ ಕರ್ನಾಟಕದ್ದಾಗಿದೆ. ಅಲ್ಲದೆ, ರಾಜ್ಯದ ಸ್ತಬ್ಧಚಿತ್ರ ಸತತವಾಗಿ ಹದಿಮೂರನೇ ಬಾರಿಗೆ ಆಯ್ಕೆಯಾದದ್ದು ದಾಖಲಾರ್ಹ ಸಂಗತಿಯಾಗಿದೆ.

ಕೌಶಲ್ಯದಿಂದ ತಯಾರಿಸಿದ ಮಡಿಕೆ, ಸೂಕ್ಷ್ಮವಾಗಿ ಕೆತ್ತನೆ ಮಾಡಿದ ಶ್ರೀಗಂಧದ ಚಿಕಣಿ (ಮಿನಿಯೇಚರ್ಸ್ ಅಥವಾ ಕಿರು ಮಾದರಿ ವಸ್ತುಗಳು), ಕೈಮಗ್ಗದ ಸೀರೆಗಳು, ಕೈಯಿಂದಲೇ ಮಾಡಿದ ವಿಶಿಷ್ಟ ಕಲಾಕೃತಿಗಳೂ ಒಳಗೊಂಡಂತೆ 16 ಕರಕುಶಲ ವಸ್ತುಗಳು ಭೌಗೋಳಿಕ ಸೂಚಿ ಸಂಕೇತದ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕವನ್ನು ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು ಎಂದೇ ಕರೆಯುತ್ತಾರೆ.

ಚನ್ನಪಟ್ಟಣ ಮತ್ತು ಕಿನ್ನಾಳ ಮರದ ಕೆತ್ತನೆ ವಸ್ತುಗಳು (ಇನ್ಲೇ ಕಾರ್ವಿಂಗ್ಸ್), ಕಂಚಿನ ಪ್ರತಿಮೆಗಳು, ಮರುಗೆಣ್ಣೆಯ ಹಾಗೂ ಬಿದರಿಯ ಕಲಾಕೃತಿಗಳು ಕರ್ನಾಟಕದ ಪ್ರಮುಖ ಕಲೆಗಳಾಗಿವೆ.

ಟೆರ್ರಾಕೋಟ ಅತ್ಯಂತ ಹಳೆಯ ಕಲೆಯಾಗಿದೆ. ವಿಜಯನಗರದ ಅರಸರು ಪೋಷಿಸುತ್ತಿದ್ದ ಕಿನ್ನಾಳದ ಮೆರುಗೆಣ್ಣೆಯ ಕಲಾಕೃತಿಗಳು, ಕರ್ನಾಟಕದ ಜೊತೆಗೆ ಅವಿನಾಭಾವ ಸಂಬಂಧ ಹೊಂದಿರುವ ಮತ್ತು ಒಂದು ಸಾವಿರ ವರ್ಷಗಳಿಗೂ ಹೆಚ್ಚು ಇತಿಹಾಸವಿರುವ ಶ್ರೀಗಂಧದ ಕಲಾಕೃತಿಗಳು ಹಾಗೂ ದಂತದ ಕೆತ್ತನೆಯ ಕಲೆ ರಾಜ್ಯಕ್ಕೇ ವಿಶಿಷ್ಟ ಎನಿಸಿದೆ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಇ-ವಾಣಿಜ್ಯ ನಿಗಮೀಕೃತ ಸಂಸ್ಥೆಯ ಸಹಯೋಗದೊಂದಿಗೆ 55,000 ಕಲಾಕಾರರಿಗೆ ಉತ್ತಮ ಮಾರುಕಟ್ಟೆಯನ್ನು ಕಲ್ಪಿಸಿದೆ.

ಸ್ವಾತಂತ್ರ್ಯ ಹೋರಾಟಗಾರರು, ಅಭಿನೇತ್ರಿ, ಸಮಾಜ ಸೇವಕರು, ಕಲಾ ಉತ್ತೇಜಕರೂ ಎಲ್ಲವೂ ಆಗಿದ್ದ ಕರ್ನಾಟಕದವರೇ ಆದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ನಶಿಸಿಹೋಗುತ್ತಿದ್ದ ಪಾರಂಪರಿಕ ಕರಕುಶಲ ವಸ್ತುಗಳ ತಯಾರಿಕಾ ಕಲೆಯನ್ನು ಉಳಿಸಲು ಪ್ರಮುಖ ಪಾತ್ರ ವಹಿಸಿದ್ದರು ಎಂಬುದು ಗಮನಾರ್ಹ.

### ಸ್ತಬ್ಧಚಿತ್ರದಲ್ಲಿ ಏನಿದೆ ?

ಕರ್ನಾಟಕದ ಸ್ತಬ್ಧಚಿತ್ರದ ಮುಂಭಾಗದಲ್ಲಿ ಮೈಸೂರಿನ ಬೀಟೆ ಮರ ಹಾಗೂ ದಂತದ ಕಸೂತಿ ಕೆತ್ತನೆಯ ಬೃಹದಾಕಾರದ ಆನೆಯ ಕಲಾಕೃತಿ ಹಾಗೂ ಈ ಕಲಾಕೃತಿಯ ಕೆಳಗಿನ ಭಾಗದಲ್ಲಿ ಯಕ್ಷಗಾನ ಬೊಂಬೆಯಾಟದ ಚಿತ್ರಣವಿದೆ. ಜೊತೆಗೆ, ಗಂಜೀಫಾ ಕಲಾಕೃತಿಗಳಿವೆ.

ಸ್ತಬ್ಧಚಿತ್ರದ ಮಧ್ಯದಲ್ಲಿ ಕಣ್ಮನ ಸೆಳೆಯುವ ಬಿದರಿ ಕಲೆಯಲ್ಲಿ ರೂಪಿಸಿರುವ ದೊಡ್ಡ ಪ್ರಮಾಣದ ಹೂಜಿ. ಹೂಜಿಯ ಇಕ್ಕೆಲಗಳಲ್ಲಿ ಕರಾವಳಿಯ ವೈಶಿಷ್ಟ್ಯವನ್ನು ಬಿಂಬಿಸುವ ಭೂತಾರಾಧನೆಯ ಮುಖವಾಡವನ್ನು ಹೊತ್ತ ಲೋಹದ ಕಲಾಕೃತಿಗಳಿವೆ. ಹೂಜಿಯ ಹಿಂಬದಿಯಲ್ಲಿ ಬಿದರಿ ಕಲೆ ಬಳಸಿ ಸಿದ್ಧಪಡಿಸಿರುವ ನವಿಲುಗಳಿವೆ.

ಅಲ್ಲದೆ, ಮಧ್ಯ ಭಾಗದ ಹಿಂಬದಿಯಲ್ಲಿ ಕಿನ್ನಾಳದ ವೈಶಿಷ್ಟ್ಯಪೂರ್ಣ ಕಲೆಯಲ್ಲಿ ಮೇಳೈಸಿದ ಬೃಹತ್ ಗಾತ್ರದ ಆಂಜನೇಯ ಸ್ವಾಮಿಯ ಮೂರ್ತಿ ಸ್ತಬ್ಧಚಿತ್ರದ ಕೇಂದ್ರ ಬಿಂದುವಿನಂತೆ ಕಂಗೊಳಿಸುತ್ತಿದೆ. ಆಂಜನೇಯ ಸ್ವಾಮಿಯ ಮೂರ್ತಿಯ ಅಕ್ಕ-ಪಕ್ಕದಲ್ಲಿ ಚನ್ನಪಟ್ಟಣದ ಬೊಂಬೆಗಳು, ಮೆರುಗೆಣ್ಣೆಯ ಆಟಿಕೆಗಳು, ನವಲಗುಂದ ಧರಿ (ಜಮಖಾನೆ), ಶ್ರೀಗಂಧ ಮರದ ಕೆತ್ತನೆಯ ಹಾಗೂ ಮಣ್ಣಿನ ಕಲಾಕೃತಿಗಳಿವೆ.

ತದನಂತರ, ಸ್ತಬ್ಧಚಿತ್ರದ ಕೊನೆಯಲ್ಲಿ ಪಾರಂಪರಿಕ ಕರಕುಶಲ ಉತ್ಪನ್ನಗಳ ತಯಾರಿಕೆಗೆ ಉತ್ತೇಜನ ನೀಡಿ ಪ್ರೋತ್ಸಾಹಿಸಿದ ಕಲಾಲೋಕದ ಮಹಾ ಮಾತೆ, ಸ್ವಾತಂತ್ರ್ಯ ಹೋರಾಟಗಾರ್ತಿ ಹಾಗೂ ಕನ್ನಡತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಗಂಧದ ಪೆಟ್ಟಿಗೆ, ನವಿಲಿನಾಕಾರದ ದೀಪದ ಕಲಶಗಳು, ಸಂಡೂರಿನ ಬಾಳೆ ನಾರಿನ ಚೀಲಗಳು ಹೀಗೆ ವಿವಿಧ ಕರಕುಶಲ ವಸ್ತುಗಳನ್ನು ಬಾಗಿನ ರೂಪದಲ್ಲಿ ನೀಡುತ್ತಿರುವ ದೃಶ್ಯಾವಳಿಯ ದೊಡ್ಡ ಪ್ರತಿಮೆ ಇದೆ.

ಅದೇ ಭಾಗದಲ್ಲಿ ಕರ್ನಾಟಕದ ಕೈಮಗ್ಗದ ಹಿರಿಮೆಯ ಇಳಕಲ್ ಕಸೂತಿ ಸೀರೆಗಳು, ಮೊಳಕಾಲ್ಮೂರು ಸೀರೆಗಳು ಹಾಗೂ ಮೈಸೂರು ರೇಷ್ಮೆ ಸೀರೆಗಳು, ಕಿನ್ನಾಳ ಕಲೆಯಲ್ಲಿ ತಯಾರಿಸಿದ ಬಾಲೆಯರ ಕಲಾಕೃತಿಗಳು, ಪಶ್ಚಿಮ ಘಟ್ಟಗಳಲ್ಲಿ ಲಭ್ಯವಿರುವ ಬೆತ್ತ, ಬಿದಿರು, ಕಾಡುಬಳ್ಳಿಗಳು ಹಾಗೂ ತಾಟಿನಿಂಗು ಮರದ ಎಲೆಯಿಂದ ತಯಾರಿಸಿದ ಬಗೆ ಬಗೆಯ ಬುಟ್ಟಿಗಳೂ ಕೂಡಾ ಸ್ತಬ್ಧಚಿತ್ರಕ್ಕೆ ವಿಶೇಷ ಮೆರುಗನ್ನು ನೀಡಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಡಾ. ಪಿ.ಎಸ್. ಹರ್ಷ ಹಾಗೂ ಜಂಟಿ ನಿರ್ದೇಶಕ ಶ್ರೀ ಡಿ.ಪಿ. ಮುರಳೀಧರ್ ಅವರು ಸ್ತಬ್ಧಚಿತ್ರ ನಿರ್ಮಾಣದ ಪ್ರತಿ ಹಂತದಲ್ಲಿ ಆಸ್ಥೆ ವಹಿಸಿ, ಅಗತ್ಯ ಸಲಹೆ ಸೂಚನೆ ನೀಡಿದ್ದಾರೆ.

ಈ ಬಾರಿಯ ಸ್ತಬ್ಧಚಿತ್ರ ನಿರ್ಮಾಣ ಕಾರ್ಯದಲ್ಲಿ ಹೆಸರಾಂತ ಕಲಾ ನಿರ್ದೇಶಕ ಶಶಿಧರ್ ಅಡಪ ನೇತೃತ್ವದ ಪ್ರತಿರೂಪಿ ಸಂಸ್ಥೆಯ ಒಂದು ನೂರಕ್ಕೂ ಹೆಚ್ಚು ಕಲಾವಿದರು, ಸುಪ್ರಸಿದ್ಧ ಸಂಗೀತ ನಿರ್ದೇಶಕ ಪ್ರವೀಣ್ ದಯಾನಂದ ರಾವ್ ಮತ್ತು ತಂಡ ಹಾಗೂ ಜಾನಪದ ತಜ್ಞ ಡಾ. ರಾಧಾಕೃಷ್ಣ ಉರಾಳ ನೇತೃತ್ವದ ಕಲಾ ಕದಂಬ ಕಲಾ ಕೇಂದ್ರದ ತಂಡವೂ ಶ್ರಮಿಸಿದೆ.

*ಕರ್ನಾಟಕ ವಾರ್ತೆ*

# ನವದೆಹಲಿಯ ಗಣರಾಜ್ಯೋತ್ಸವ ಪರೇಡ್ : ಕರ್ನಾಟಕದ ಐದು ದಶಕ

ಕರ್ನಾಟಕ ಹಲವು ಬಗೆಯ ವಿಷಯ ವೈವಿಧ್ಯಗಳ ಗಣಿ. ಇತಿಹಾಸ ಪ್ರಸಿದ್ಧ ಕೋಟೆ, ಕೊತ್ತಲಗಳು ಕಣ್ಣನ ಸೆಳೆಯುವ ಕರಾವಳಿ, ಮನ ಮುದಗೊಳಿಸುವ ಹಚ್ಚ ಹಸುರಿನ ದಟ್ಟಾರಣ್ಯಗಳು, ವೈವಿಧ್ಯಮಯ ಬದುಕು, ಇವನ್ನೆಲ್ಲಾ ತನ್ನ ಒಡಲಲ್ಲಿಟ್ಟುಕೊಂಡ ಕನ್ನಡ ನಾಡಿನ ವಿಶೇಷತೆಗಳನ್ನು ರಾಷ್ಟ್ರದ ಗಮನ ಸೆಳೆಯುವುದರೊಂದಿಗೆ ರಾಷ್ಟ್ರದ ಮುನ್ನಡೆಯಲ್ಲಿ ನಾವೂ ಕೂಡ ಮುಂದಡಿಯಿಡುತ್ತಿದ್ದೇವೆ ಎಂಬುದಕ್ಕೆ ಧ್ಯೋತಕವಾಗಿ ಗಣರಾಜ್ಯೋತ್ಸವ ದಿನದಂದು ಜರುಗುವ ಪ್ರತಿಷ್ಠಿತ ಪರೇಡ್‌ನಲ್ಲಿ ಪಾಲ್ಗೊಳ್ಳುತ್ತಾ ಬಂದಿರುವ ಕರ್ನಾಟಕ ಅತ್ಯಂತ ಕಲಾತ್ಮಕ ಹಾಗೂ ಆಕರ್ಷಕ ಚಲನರೂಪಕಗಳನ್ನು ಪ್ರಸ್ತುತಿಗೊಳಿಸುತ್ತಿದೆ. ಸ್ವಾತಂತ್ರ್ಯ ಭಾರತ ತನ್ನದೇ ಆದ ಸಂವಿಧಾನವನ್ನು ಒಪ್ಪಿಕೊಂಡು ಅಂಗೀಕರಿಸಿದ ನಂತರ ಪ್ರಥಮ ಗಣರಾಜ್ಯೋತ್ಸವ ಪಥಸಂಚಲನ ನಡೆದ ದಿನ 26 ಜನವರಿ 1950.

15 ಆಗಸ್ಟ್ 1947ರಂದು ಭಾರತ ಸ್ವಾತಂತ್ರ್ಯ ಗಳಿಸಿತಾದರೂ ನಮ್ಮದೇ ಆದ ಸಂವಿಧಾನ ಇರಲಿಲ್ಲ. ಹೀಗಾಗಿ ಭಾರತ ಸರ್ಕಾರ 1947ರ ಆಗಸ್ಟ್ 29ರಂದು ಕಾನೂನು ಪರಿಣಿತ ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನ ಕರಡು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿ ಸಂವಿಧಾನ ಕರಡು ಪ್ರತಿಯನ್ನು ಸಿದ್ಧಗೊಳಿಸಿ, 1949ರ ನವೆಂಬರ್ 4 ರಂದು ಮಂಡಿಸಿತು. ಪರಿಶೀಲನೆ ಹಾಗೂ ತಿದ್ದುಪಡಿಗಳ ನಂತರ 1950ರ ಜನವರಿ 26 ರಂದು ಭಾರತದ ಸ್ವತಂತ್ರ ಸಂವಿಧಾನ ಜಾರಿಗೆ ಬಂದಿತು. ಪ್ರತಿ ವರ್ಷ ಅದೇ ದಿನ (ಜನವರಿ 26) ವನ್ನು ನಾವು ಗಣತಂತ್ರ ದಿನಾಚರಣೆಯನ್ನಾಗಿ ಆಚರಿಸುತ್ತೇವೆ. ಈ ದಿನ ರಾಷ್ಟ್ರದ ಮೂರು ರಾಷ್ಟ್ರೀಯ ದಿನಾಚರಣೆಗಳಲ್ಲೊಂದು.

**ಸ್ವತಂತ್ರ ಭಾರತದ ಮುನ್ನಡೆ, ವೈವಿಧ್ಯತೆಯನ್ನು ಅರಿಯುವ ಮತ್ತು ರಾಷ್ಟ್ರದ ಏಳಿಗೆಗಾಗಿ ಸಮರ್ಪಣಾ ಭಾವವನ್ನು ಬೆಳೆಸಿಕೊಳ್ಳುವ ಅಪೂರ್ವ ಸಂದರ್ಭ ನವದೆಹಲಿಯ ರಾಜ್‌ಪಥದಲ್ಲಿನ ಗಣರಾಜ್ಯೋತ್ಸವ ಪಥಸಂಚಲನ.**

ದೇಶದ ಎಲ್ಲೆಡೆ ಗಣರಾಜ್ಯೋತ್ಸವವನ್ನು ಆಚರಿಸುವುದು ಕಳೆದ 72 ವರ್ಷಗಳಿಂದ ನಡೆದು ಬಂದಿರುವ ರೂಢಿ. ಗಣರಾಜ್ಯೋತ್ಸವದ ಪ್ರಧಾನ ಆಚರಣೆ ಜರುಗುವುದು ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ.

ಮೊದಲ ಗಣರಾಜ್ಯ ದಿನೋತ್ಸವ ನಡೆದಿದ್ದು ರಾಷ್ಟ್ರಪತಿ ಭವನದ ಸಮೀಪದ ರಾಜಪಥದಲ್ಲಿ ಆಗ ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದ್ ಅವರನ್ನು ಕುದುರೆ ಸಾರೋಟಿನಲ್ಲಿ ರಾಜಪಥ ಗಣತಂತ್ರ ದಿನದ ಸಮಾರಂಭಕ್ಕೆ ಕರೆ ತರಲಾಗಿತ್ತು. ಭಾರತದ ಗಣರಾಜ್ಯ ದಿನಾಚರಣೆಗೆ ಸೇನೆ, ನೌಕಾ ಹಾಗು ವಾಯು ಪಡೆಗಳಿಗೆ ಸೇರಿದ 18 ರಿಂದ 24 ವಿವಿಧ ಪಡೆಗಳು ನಿಗದಿತ ಸಮವಸ್ತ್ರ ಮತ್ತು ಪೋಷಾಕು ಧರಿಸಿ ಪಥಸಂಚಲನದಲ್ಲಿ ಹೆಜ್ಜೆ ಹಾಕುತ್ತವೆ. ಇದರೊಟ್ಟಿಗೆ ಎನ್.ಸಿ.ಸಿ. ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪರೇಡ್‌ನಲ್ಲಿ ಸಾಗಿ ಬರುವರು.

ಶೌರ್ಯ ಪ್ರಶಸ್ತಿ ವಿಜೇತ ಮಕ್ಕಳನ್ನು ಆನೆ ಅಥವಾ ಅಷ್ಟ ಜೀಪುಗಳಲ್ಲಿ ಮೆರವಣಿಗೆ ಕರೆತರುವುದು ರೂಢಿ. ಜೊತೆಗೆ ವರ್ಣ ರಂಜಿತ ವಸ್ತ್ರಗಳಿಂದ ಅಲಂಕರಿಸಲಾದ ಒಂಟೆಗಳ ಪಡೆ ಹೆಜ್ಜೆ ಹಾಕುವುದು ಪಥ ಸಂಚಲನದ ವಿಶೇಷ ಆಕರ್ಷಣೆ.

ಭಾರತದ ಭವ್ಯ ಪರಂಪರೆಯನ್ನು ಆಧುನಿಕತೆಯೊಂದಿಗೆ ಅನುಸಂಧಾನಗೊಳಿಸುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ದೇಶದ ಮಿಲಿಟರಿ ಶಕ್ತಿಯ ಅನಾವರಣವೇ ಬಹುಮುಖ್ಯ ಉದ್ದೇಶ.

ಅತ್ಯಾಧುನಿಕ ಯುದ್ಧ ಪರಿಕರಗಳು, ರಾಕೆಟ್, ಶಕ್ತಿಶಾಲಿ ವಿಮಾನಗಳ ದಂಡು, ರಡಾರ್, ಕ್ಷಿಪಣಿ, ಟ್ಯಾಂಕ್‌ಗಳು ಉಪಗ್ರಹ ಸಂಪರ್ಕಿತ ಸಾಧನೆಗಳನ್ನು ಹೊತ್ತ ವಾಹನಗಳ ಸಾಲು ದೇಶ ವಾಸಿಗಳ ಮುಂದೆ ಪ್ರಸ್ತುತಿಗೊಳ್ಳುತ್ತವೆ.

ಸ್ವಾತಂತ್ರ್ಯ ಹೋರಾಟ ಹಾಗೂ ನಮ್ಮದೇ ಸೇನಾಪಡೆಗಳು ಪಾಲ್ಗೊಂಡ ಸಮರಗಳಲ್ಲಿ ಹುತಾತ್ಮರಾದ ವೀರ ಯೋಧರ ಗೌರವಾರ್ಥ ನಿರ್ಮಿಸಿರುವ ಅಮರ್ ಜವಾನ್ ಸ್ಮಾರಕಕ್ಕೆ ಹೂವಿನ ದಂಡೆ ಇಟ್ಟು ಗೌರವ ಸಲ್ಲಿಸುವ ಮುಖೇನ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ನಾಂದಿ.

ಹಲವು ರಾಜವಂಶಗಳೂ ಆಳಿ ಹೋದ ನವದೆಹಲಿಯಲ್ಲಿ ನೂರು ವರ್ಷಗಳ ಹಿಂದೆ ರೂಪುಗೊಂಡ ರಾಷ್ಟ್ರಪತಿ ಭವನದಿಂದ ರಾಜಪಥದ ಮೂಲಕ ಇಂಡಿಯಾ ಗೇಟ್–ಕೆಂಪುಕೋಟೆಯವರೆಗೆ ಸಾಗಿ ಬರುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ದೇಶದ ಅಭಿವೃದ್ಧಿಯನ್ನು ಬಿಂಬಿಸುವ ಸ್ತಬ್ಧಚಿತ್ರಗಳು ಕಣ್ಮನ

## ಸುವರ್ಣ ವರ್ಷ : ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಹರ್ಷ

**ರಾಷ್ಟ್ರದ ರಾಜಧಾನಿಯಲ್ಲಿ ಗಣರಾಜ್ಯೋತ್ಸವ ದಿನಾಚರಣೆಯ ಸುಸಂದರ್ಭದಲ್ಲಿ ಸ್ತಬ್ಧಚಿತ್ರ ಪ್ರದರ್ಶನದಲ್ಲಿ ವಿಶಾಲ ಮೈಸೂರು ರಾಜ್ಯ (ಕರ್ನಾಟಕ ರಾಜ್ಯವು) ಪಾಲ್ಗೊಳ್ಳಲು ಮೊದಲು ಪ್ರಾರಂಭಿಸಿದ್ದು 1972 ರಲ್ಲಿ !**

**ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಅವರು ಈ ಜವಾಬ್ದಾರಿಯನ್ನು ಅಂದಿನ ವಾರ್ತಾ ಮತ್ತು ಪ್ರಚಾರ ಇಲಾಖೆಗೆ ವಹಿಸಿದ್ದರು. ಅಂದಿನಿಂದ ಇಂದಿನವರೆಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೇ ರಾಜ್ಯ ಸರ್ಕಾರದ ಪರವಾಗಿ ಸ್ತಬ್ಧಚಿತ್ರ ನಿರ್ಮಾಣ ಹಾಗೂ ಪ್ರದರ್ಶನದ ಕಾರ್ಯವನ್ನು ನಿರ್ವಹಿಸುತ್ತಾ ಬಂದಿದೆ.**

**ಇದೀಗ ಭಾರತ ಸ್ವಾತಂತ್ರ್ಯದ ಅಮೃತ ವರ್ಷ ಮಹೋತ್ಸವ ವರ್ಷದಲ್ಲಿ ನವದೆಹಲಿಯಲ್ಲಿನ ಗಣರಾಜ್ಯೋತ್ಸವ ದಿನಾಚರಣೆಯ ಸಂಭ್ರಮದಲ್ಲಿ ಕರ್ನಾಟಕದ ಪಾಲ್ಗೊಳ್ಳುವಿಕೆ 50 ನೇ ವರ್ಷದ್ದಾಗಿದೆ.**

**ಅಂತೆಯೇ, ರಾಜ್ಯದ ಪರವಾಗಿ ಸ್ತಬ್ಧಚಿತ್ರ ನಿರ್ಮಾಣ ಮತ್ತು ಪ್ರದರ್ಶನ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾಯಕ ಕೂಡಾ ಸುವರ್ಣ ವರ್ಷ ಪೂರೈಸುತ್ತಿದೆ ಎಂಬುದು ಹರ್ಷದಾಯಕ ಸಂಗತಿಯಾಗಿದೆ.** ◻

***ಕರ್ನಾಟಕ ವಾರ್ತೆ***



ಬಿದರಿ ಕಲೆ



ಭೂತಾರಾಧನೆ



ಕಿನ್ನಾಳ ಕಲೆ



ಟಿಪ್ಪು ಸುಲ್ತಾನ



ಚನ್ನಪಟ್ಟಣದ ಗೊಂಬೆ



ಕಾಫಿ ನಾಡು



ಸಾಂಸ್ಕೃತಿಕ ವೈಭವ



ವನ್ಯಜೀವಿ



1924 ಬೆಳಗಾವಿ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

ಸೆಳೆವ ವಿಷಯ ವಿಶೇಷಗಳನ್ನು ಪ್ರಸ್ತುತಿಗೊಳಿಸುವ ಕೇಂದ್ರ–ರಾಜ್ಯ ಸರ್ಕಾರಗಳ ವೈವಿಧ್ಯಮಯ ಸ್ತಬ್ಧಚಿತ್ರಗಳು ಅಸಂಖ್ಯ ಕಲಾವಿದರು, ಬಗೆ–ಬಗೆಯ ವಾದ್ಯಗೋಷ್ಠಿಗಳೊಂದಿಗೆ ನೃತ್ಯ ವೈವಿಧ್ಯ, ಪರೇಡ್‌ನ ಇನ್ನೊಂದು ವಿಶೇಷ.

ಕಣ್ಣು ಹಾಯಿಸಿದ ಕಡೆಗೆಲ್ಲ ಎದೆಯುಬ್ಬಿಸುವ ಹೆಮ್ಮೆಯ ತ್ರಿವರ್ಣ ಧ್ವಜಗಳು, ರಕ್ಷಣಾ ವಿಭಾಗಗಳ ವಿವಿಧ ಪಡೆಗಳ ರಾಜ ಗಾಂಭೀರ್ಯದ ಕವಾಯಿತು–ಇದರೊಟ್ಟಿಗೆ ಆಗಸದಲ್ಲಿ ಚಮತ್ಕಾರ ತೋರುವ ನೂರಾರು ವಿಮಾನಗಳು, ಪುಷ್ಪವೃಷ್ಟಿ ಮಾಡುವ ಹೆಲಿಕಾಪ್ಟರ್‌ಗಳು ಇವೆಲ್ಲವೂ ಗಣರಾಜ್ಯೋತ್ಸವ ಪರೇಡ್‌ಗೆ ತರುತ್ತವೆ ಹಬ್ಬದ ಮೆರುಗು.

**"ಭಾರತೀಯರೆಲ್ಲರೂ ಸ್ವತಂತ್ರ ದೇಶದ ಮುನ್ನಡೆಯನ್ನು ಅರಿತುಕೊಳ್ಳುವ ಮತ್ತು ರಾಷ್ಟ್ರದ ಏಳಿಗೆಗಾಗಿ ಪಣ ತೊಡುವ ಅಪೂರ್ವ ಸಂದರ್ಭ ರಾಜಪಥದ ಗಣರಾಜ್ಯೋತ್ಸವ ಪರೇಡ್".**

ಒಕ್ಕೂಟ ರಾಷ್ಟ್ರ ಭಾರತದ ಎಲ್ಲಾ ರಾಜ್ಯಗಳು–ಕೇಂದ್ರಾಡಳಿತ ಪ್ರದೇಶಗಳು ಗಣರಾಜ್ಯೋತ್ಸವ ಪರೇಡ್‌ನಲ್ಲಿ ತಮ್ಮ ಸಾಧನೆ ಮತ್ತು ವೈಶಿಷ್ಟ್ಯಗಳೊಂದಿಗೆ ಭಾಗವಹಿಸುವ ಆಕಾಂಕ್ಷೆ ಸಹಜ. ಆದರೆ, ಭಾರತದಂತಹ ಬೃಹತ್ ರಾಷ್ಟ್ರದ ಎಲ್ಲಾ ರಾಜ್ಯಗಳಿಗೂ ಪರೇಡ್‌ನಲ್ಲಿ ಅವಕಾಶ ಒದಗಿಸಿಕೊಡುವುದು ತುಂಬಾ ತ್ರಾಸದ ವಿಚಾರ.

ದೇಶ–ವಿದೇಶಗಳ ಕೇಂದ್ರ ಬಿಂದುವಾದ ಪರೇಡ್‌ನಲ್ಲಿ ಪಾಲ್ಗೊಳ್ಳುವ ಗುಣಮಟ್ಟ– ವೈವಿಧ್ಯ ವಿಷಯ, ಕಠಿಣ ಮಾನದಂಡಗಳಿಂದ, ಸಮಯ ಮತ್ತು ಕಾರಣಗಳಿಗಾಗಿ 10–15 ರಾಜ್ಯಗಳು ಮಾತ್ರ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಲು ಆಯ್ಕೆಗೊಳ್ಳುವುದು ಅನೂಚಾನವಾಗಿ ನಡೆದು ಬಂದಿರುವ ಪರಿಪಾಠ.

ಸ್ವಾತಂತ್ರ್ಯಾನಂತರ ಪ್ರತಿಷ್ಠಿತ ನವದೆಹಲಿ ರಾಜಪಥದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯ ಆರಂಭಿಸಿ ಐದು ದಶಕಗಳೇ ಕಳೆದಿವೆ. ಆರಂಭಕ್ಕೆ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಳು ಒಟ್ಟಾಗಿದ್ದವು. ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಳು ಪ್ರತ್ಯೇಕಗೊಂಡ ಮೇಲೆ ವಾರ್ತಾ ಇಲಾಖೆಯು ನವದೆಹಲಿ ಗಣರಾಜ್ಯೋತವದಲ್ಲಿ ಭಾಗವಹಿಸಲು ಅವಕಾಶ ಪಡೆದಿದ್ದು 1972 ರಲ್ಲಿ. ಆಗಿನಿಂದ ಸತತವಾಗಿ ಕರ್ನಾಟಕ ಭಾಗವಹಿಸಲು ಪ್ರಯತ್ನ ಮಾಡುತ್ತಿದ್ದರೂ ಐದಾರು ಅವಕಾಶಗಳನ್ನು ರಾಜ್ಯ ಕಳೆದುಕೊಂಡಿದೆ. ಇನ್ನುಳಿದಂತೆ ಪಥಸಂಚಲನದಲ್ಲಿ ಕರ್ನಾಟಕದ ಸ್ತಬ್ಧಚಿತ್ರ ಸಾಗಿ ಬಂದಿದೆ.

ಐವತ್ತು ವರ್ಷಗಳಿಂದ ಕರ್ನಾಟಕ ತನ್ನ ಶ್ರೀಮಂತ ಸ್ಥಳ–ಘಟನೆ–ವೈವಿಧ್ಯಗಳನ್ನು ಸ್ತಬ್ಧಚಿತ್ರದಲ್ಲಿ ಮೂಡಿಸುತ್ತ ಬಂದಿದೆ. ಹಲವು ಜನಪದ ತಂಡಗಳ ಕಲಾವಿದರು, ನೃತ್ಯ ಕಲಾವಿದರು, ಕರ್ನಾಟಕ ಸ್ತಬ್ಧಚಿತ್ರಗಳೊಂದಿಗೆ ಹೆಜ್ಜೆ ಹಾಕಿದ್ದಾರೆ. ಹೆರಾಂತ ಸಂಗೀತ ನಿರ್ದೇಶಕರು, ಗಾಯಕರು ಸುಶ್ರಾವ್ಯ ಸಂಗೀತವನ್ನು ಪಥಸಂಚಲನದಲ್ಲಿ ಉಣಬಡಿಸಿದ್ದಾರೆ.

ಮರೆಯಲಾಗದ ಸಾಮ್ರಾಜ್ಯವೆಂದು ಬಣ್ಣಿಸಲ್ಪಟ್ಟಿರುವ ವಿಜಯನಗರದ ವೈಭವ, ಇಡೀ ದೇಶಕ್ಕೆ ಅತಿಹೆಚ್ಚು ಕಾಫಿಯನ್ನು ಕೊಡುವ, ರೇಷ್ಮೆಯನ್ನು ಉತ್ಪಾದಿಸುವ ಸಂಗತಿಗಳು ಸ್ತಬ್ಧಚಿತ್ರಗಳಲ್ಲಿ ಮೂಡಿ ಬಂದಿವೆ.

ಭಾರತೀಯ ಶಿಲ್ಪ ಪರಂಪರೆಯಲ್ಲಿ ಮಹತ್ವದ ಸ್ಥಾನ ಪಡೆದಿರುವ ಬೇಲೂರು, ಹಳೆಬೀಡು, ಪಟ್ಟದಕಲ್ಲು ದೇವಾಲಯಗಳು, ಹೊಯ್ಸಳ, ಚಾಲುಕ್ಯ, ರಾಷ್ಟ್ರಕೂಟ ಶಿಲ್ಪ ಶೈಲಿಗಳು ಸುಂದರ ಕೃತಿಗಳಾಗಿ ಸ್ತಬ್ಧಚಿತ್ರಗಳಲ್ಲಿ ಅರಳಿವೆ.

ಕರಕುಶಲ ಕಲೆಗಳಲ್ಲಿ ಪ್ರತ್ಯೇಕ ಸ್ಥಾನಗಳಿಸಿರುವ ಬೀದರಿನ ಬಿದ್ರಿಕಲೆ, ಬಣ್ಣ ಬಣ್ಣದ ಕಿನ್ನಾಳದ ಗೊಂಬೆಗಳು, ಚನ್ನಪಟ್ಟಣದ ಆಟಿಕೆಗಳು, ಕಲಘಟನಿಯ ಕಲಾತ್ಮಕ ತೊಟ್ಟಿಲು–ಇವೆ ಅಲ್ಲವೆ.

ಪ್ರಸಿದ್ಧ ಕರಗನೃತ್ಯ, ಕರಾವಳಿಯ ಭೂತಾರಾಧನೆ, ಉತ್ತರ ಕರ್ನಾಟಕದ ಶ್ರೀಕೃಷ್ಣ ಪಾರಿಜಾತ ಕಲೆಗಳೂ ರಾಜಪಥದಲ್ಲಿ ಪ್ರಸ್ತುತಿಗೊಂಡಿವೆ.

ಬೆಂಗಳೂರಿನ ಪ್ರಸಿದ್ಧ ಕೆಂಪು ತೋಟ (ಲಾಲ್‌ಭಾಗ್), ಬೀದರಿನ ಅನುಭವ ಮಂಟಪ, ಮೈಸೂರಿನ ಆನೆ ಅಂಬಾರಿಗಳೂ ಗಣರಾಜ್ಯೋತ್ಸವದಲ್ಲಿ ಅನಾವರಣಗೊಂಡಿವೆ.

ಸ್ತಬ್ಧಚಿತ್ರಗಳಿಗೂ ಪ್ರಶಸ್ತಿ ಪುರಸ್ಕಾರ ನೀಡುವ ಪದ್ಧತಿ ಶುರುವಾದ ಮೇಲೆ ಕರ್ನಾಟಕದ ಸ್ತಬ್ಧಚಿತ್ರಗಳೇನೂ ಹಿಂದೆ ಬಿದ್ದಿಲ್ಲ.

ಮಹಾಮಸ್ತಕಾಭಿಷೇಕ ವರ್ಷ ಪ್ರಸ್ತುತವಾದ ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ, ಪಟ್ಟದಕಲ್ಲಿನ ದೇವಾಲಯ ಸಮುಚ್ಚಯಕ್ಕೆ ಪ್ರಶಸ್ತಿ ಗುಣಮಟ್ಟದ ನಿರ್ಮಾಣ, ಸುಶ್ರಾವ್ಯ ಸಂಗೀತ ಹೀಗೆ ನಾಲ್ಕಾರು ವಿಭಾಗಗಳಲ್ಲಿ ಕರ್ನಾಟಕ ಸ್ತಬ್ಧಚಿತ್ರಗಳಿಗೆ ಪ್ರಶಸ್ತಿಗಳು ಸಂದಿವೆ.



ಅನುಭವ ಮಂಟಪ



ವಿಜಯನಗರ ಸಾಮ್ರಾಜ್ಯ

ಹೆಸರಾಂತ ಚಿತ್ರಕಲಾವಿದರಾದ ಗುರುನಾಥ ಶೆಣೈ, ಎಂ.ಬಿ. ಪಾಟೀಲ, ಎಚ್.ಜಿ. ವಾಸುದೇವ್, ಸುದೇಶ ಮಹಾನ್, ಶಶಿಧರ ಅಡಪ ಇವರೆಲ್ಲ ಕರ್ನಾಟಕದ ಸ್ತಬ್ಧಚಿತ್ರಗಳ ವಿನ್ಯಾಸಗೊಳಿಸಿ, ನಾಡಿನ ವಿಶಿಷ್ಟ ವಿಷಯಗಳಿಗೆ ಜೀವ ತುಂಬಿದ್ದರೆ, ಸೋಮನ ಕುಣಿತ, ಡೊಳ್ಳು, ಶ್ರೀಕೃಷ್ಣ ಪಾರಿಜಾತ, ಕರಕುಶಲ ಕರ್ಮಿಗಳು ಕರ್ನಾಟಕದ ಸ್ತಬ್ಧಚಿತ್ರಗಳು ಮಿನುಗಲು ಕೈಜೋಡಿಸಿದ್ದಾರೆ.

***ಕರ್ನಾಟಕ ವಾರ್ತೆ***



ನವದೆಹಲಿಯ ರಾಷ್ಟ್ರೀಯ ರಂಗಶಾಲಾ ಶಿಬಿರದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಸಿದ್ಧಗೊಳಿಸಿದ ಕರ್ನಾಟಕದ ಸ್ತಬ್ಧಚಿತ್ರವನ್ನು ವೀಕ್ಷಿಸಿದ ಕರ್ನಾಟಕ ಭವನದ ಅಪರ ನಿವಾಸಿ ಆಯುಕ್ತರಾದ ಡಾ. ಸಿಮಿ ಮರಿಯಮ್ ಜಾರ್ಜ್, ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾದ ಎಚ್. ಪ್ರಸನ್ನ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕರಾದ ಡಿ.ಪಿ. ಮುರಳೀಧರ್, ಕಲಾ ನಿರ್ದೇಶಕ ಶಶಿಧರ ಅಡಪ ಹಾಗೂ ಕರ್ನಾಟಕ ಭವನದ ವೈದ್ಯ ಡಾ. ಕಾರ್ತಿಕ್ ಅವರು ಉಪಸ್ಥಿತರಿದ್ದರು.

# ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕೊಡಗಿನ ಕುವರಿ ರಿಷಿಕಾ ಬೆಳ್ಳಿಯಪ್ಪ





ದೇಶದ 73ನೇ ಗಣರಾಜ್ಯೋತ್ಸವದ ದೆಹಲಿ ಪಥ ಸಂಚಲನಕ್ಕೆ ಎನ್.ಸಿ.ಸಿ. ಕೆಡೆಟ್‌ಗಳ ತಂಡದಲ್ಲಿ ಕುಶಾಲನಗರದ ಕುಮಾರಿ ರಿಷಿಕಾ ಬೆಳ್ಳಿಯಪ್ಪ ಆಯ್ಕೆಯಾಗಿದ್ದರು. ಕರ್ನಾಟಕ ಹಾಗೂ ಗೋವಾ ರಾಜ್ಯಗಳಿಂದ ಪ್ರತಿನಿಧಿಸಿದ್ದ ಒಟ್ಟು 57 ವಿದ್ಯಾರ್ಥಿನಿಯರಲ್ಲಿ ಎಂಟು ಮಂದಿ ಆಯ್ಕೆಯಾಗಿದ್ದು ಇವರಲ್ಲಿ ರಿಷಿಕಾ ಕೂಡ ಒಬ್ಬರಾಗಿದ್ದಾರೆ. ಮೈಸೂರು-ಕೊಡಗು ಹಾಗೂ ಮಂಗಳೂರು ವಿಭಾಗದಿಂದ ಆಯ್ಕೆಯಾದ ಏಕೈಕ ಏರ್‌ವಿಂಗ್ ವಿದ್ಯಾರ್ಥಿನಿಯಾಗಿದ್ದಾರೆ ಕುಶಾಲನಗರದ ಮಾದಾಪಟ್ಟಣದ ನಿವಾಸಿಗಳಾದ ಶ್ರೀ ತಡಿಯಪ್ಪ ಪಿ. ಬೆಳ್ಳಿಯಪ್ಪ ಹಾಗೂ ಅಂಚೆ ಇಲಾಖೆಯ ಶ್ರೀಮತಿ ನಳಿನಿ ದಂಪತಿಗಳ ಸುಪುತ್ರಿ. ಪ್ರಾಥಮಿಕ ಶಿಕ್ಷಣವನ್ನು ವಿರಾಜ ಪೇಟೆಯಲ್ಲಿರುವ ಸೈಂಟ್ ಆನ್ಸ್ ಶಾಲೆಯಲ್ಲಿ ಪೂರೈಸಿರುವ ಇವರು ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಮೊದಲ ವರ್ಷದ ಬಿಸಿಎ ವ್ಯಾಸಂಗ ಮಾಡುತ್ತಿದ್ದಾರೆ. ಬಾಸ್ಕೆಟ್ ಬಾಲ್ ಹಾಗೂ ಹ್ಯಾಂಡ್ ಬಾಲ್‌ನ ರಾಷ್ಟ್ರೀಯ ಆಟಗಾರ್ತಿಯೂ ಆಗಿದ್ದಾರೆ.

ಪಥಸಂಚಲನದಲ್ಲಿ ಭಾಗವಹಿಸಿದ ರಿಷಿಕಾ ಅವರು ತಮ್ಮ ಅನುಭವವನ್ನು ಹೀಗೆ ಮುಂದಿಡುತ್ತಾರೆ. ಪಥಸಂಚಲನದಲ್ಲಿ ಭಾಗವಹಿಸಲು ಅವಕಾಶ ದೊರೆತಿರುವುದು ಸಂತಸ ತಂದಿದೆ. ನಾನಿದನ್ನು ಸಾಧನೆ ಎನ್ನಲಾರೆ. ಇದು ಕನಸಾಗಿರಲಿಲ್ಲ, ನನ್ನ ಪ್ರಯತ್ನ. ನಾನು ಮಾಡಬೇಕೆಂದಿದ್ದೆ, ಅದು ಈಗ ನೆರವೇರಿತು. ಶಿಬಿರದಲ್ಲಿ ಒಟ್ಟು 43 ದಿನಗಳಲ್ಲಿ ನಾನು ಕಲಿತಿದ್ದು, ನಾವು ಮಾಡುವ ಕೆಲಸದಲ್ಲಿ ಶಿಸ್ತು, ಸಮಯ ಪಾಲನೆ ಬಹಳ ಮುಖ್ಯವಾದುದು. ಕರ್ನಾಟಕದಿಂದ ಬಂದ ನಮಗೆ ಉತ್ತರದ ಈ ಮೈಕೊರೆವ ಚಳಿಯ ಮಧ್ಯೆಯೂ ದಿನ ಬೆಳಿಗ್ಗೆ 3.30ಕ್ಕೆ ಎದ್ದೇಳುವುದೇ ಮೊದಲ ಸವಾಲಾಗಿತ್ತು. ಪ್ರಯತ್ನಪಟ್ಟರೆ ಇಂತಹ ಅವಕಾಶ ಎಲ್ಲರಿಗೂ ಸಿಗಬಹುದು. ಅಂದುಕೊಂಡಿದ್ದನ್ನು ಸಾಧಿಸಲು ಯಾವ ಹಿಂಜರಿಕೆಯೂ ಬೇಡ ಎನ್ನುತ್ತಾರೆ.

ಮುಂದೆ ಓದಿ ಡಾಟಾ ಸೈಂಟಿಸ್ಟ್ ಆಗಬೇಕೆಂಬ ಇಚ್ಛೆಯುಳ್ಳ ಕುಮಾರಿ ರಿಷಿಕಾ ಅವರ ಭವಿಷ್ಯಕ್ಕೆ ಶುಭ ಹಾರೈಸೋಣ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ◘

***ಅರವಿಂದ ಬಿಜೈ***

# ಗಣರಾಜ್ಯೋತ್ಸವ ಪಥಸಂಚಲನದಲ್ಲಿ ದೆಹಲಿ ಕನ್ನಡ ಕುವರಿ ನಿಸರ್ಗ ಈಟಿ



(ಚಿತ್ರದಲ್ಲಿ ಮಧ್ಯದಲ್ಲಿ ನಿಂತಿರುವವರು)



73ನೇ ಗಣರಾಜ್ಯೋತ್ಸವದ ದಿನದಂದು ದೆಹಲಿಯ ಪ್ರತಿಷ್ಠಿತ ರಾಜಪಥದಲ್ಲಿ ನಡೆದ ಪರೇಡ್ ನಲ್ಲಿ ಕೇಂದ್ರೀಯ ಲೋಕ ನಿರ್ಮಾಣ ವಿಭಾಗವು ಸಿದ್ಧಪಡಿಸಿದ ಸ್ತಬ್ಧಚಿತ್ರದಲ್ಲಿ ದೆಹಲಿ ಕನ್ನಡಿಗರಾದ ಡಾ. ಅಶೋಕ ಮು. ಈಟಿ ಹಾಗೂ ಡಾ. ರೂಪಶ್ರೀ ದಂಪತಿಗಳ ದ್ವಿತೀಯ ಸುಪುತ್ರಿಯಾದ ಕುಮಾರಿ ನಿಸರ್ಗ ಈಟಿಯವರು ಭಾಗವಹಿಸಿದ್ದರು.

ಈ ಸ್ತಬ್ಧಚಿತ್ರವು ನೇತಾಜಿ ಸುಭಾಸ್ ಚಂದ್ರ ಬೋಸರ 125ನೇ ಜನ್ಮದಿನದ ಅಂಗವಾಗಿ ಏರ್ಪಡಿಸಿದ್ದಾಗಿತ್ತು. ನಮ್ಮ ಹೊರನಾಡ ಕನ್ನಡ ಕುವರಿಯಾದ ನಿಸರ್ಗ ಈಟಿಯವರು ಜನಕಪುರಿಯ 'ಸೇಂಟ್ ಫ್ರಾನ್ಸಿಸ್ ಡೀಸೇಲ್ಸ್' ಸ್ಕೂಲ್ ನಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದು, ಸ್ಕೂಲಿನಿಂದ ಈ ಸ್ತಬ್ಧಚಿತ್ರಕ್ಕೆ ಆಯ್ಕೆಯಾದ ಎಂಟು ಜನ ಮಕ್ಕಳಲ್ಲಿ ಇವರೂ ಒಬ್ಬರಾಗಿದ್ದರು. ದೆಹಲಿಯ ಪ್ರತಿಷ್ಠಿತ ರಾಜಪಥದಲ್ಲಿ ದೇಶದ ರಾಷ್ಟ್ರಪತಿ ಹಾಗೂ ಪ್ರಧಾನಮಂತ್ರಿಗಳ ಸಮ್ಮುಖದಲ್ಲಿ ನಡೆಯುವಂತಹ ಈ ಕಾರ್ಯಕ್ರಮದಲ್ಲಿ ಕುಮಾರಿ ನಿಸರ್ಗ ಈಟಿಯವರು ಭಾಗವಹಿಸಿದ್ದು ದೆಹಲಿ ಕನ್ನಡಿಗರಾದ ನಮಗೆಲ್ಲರಿಗೂ ಸಂತೋಷ ಹಾಗೂ ಹೆಮ್ಮೆ ತಂದಂತಹ ವಿಷಯವಾಗಿದೆ.

ವಿವಿಧ ಪುಷ್ಪಗಳಿಂದ ಕೂಡಿದ ಅತೀ ಸುಂದರವಾದ ಈ ಸ್ತಬ್ಧಚಿತ್ರದ ವಿನ್ಯಾಸ ಮಾಡಿದವರು ನಮ್ಮ ಕನ್ನಡಿಗರೇ ಆದ ಜನಕಪುರಿಯ ನಿವಾಸಿ ಶ್ರೀಮತಿ ನಯನಾ ಹಾಗೂ ಶ್ರೀ ಸಫಲ್ ಮನಕಾಪುರೆಯವರು. ಇವರೆಲ್ಲರಿಗೂ ಅಭಿನಂದನೆಗಳು.

ಮತ್ತೊಂದು ಸಂತೋಷದ ಸಂಗತಿಯೆಂದರೆ ಈ ಸ್ತಬ್ಧಚಿತ್ರಕ್ಕೆ ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯವು ಈ ಸಾಲಿನ ವಿಶೇಷ ಬಹುಮಾನವನ್ನು ಘೋಷಿಸಿದೆ. ◘

***ಅಭಿಮತ ವರದಿ***

# ಶರಣರ ವಚನಗಳಲ್ಲಿ ಪ್ರಜಾಪ್ರಭುತ್ವದ ಅಂಶಗಳು ಗಾಢವಾಗಿ ಧ್ವನಿತಗೊಂಡಿವೆ - ಚಿಂತಕ ಡಾ. ಬಸವರಾಜ ಸಾದರ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದೆಹಲಿ ಘಟಕವು ದಿನಾಂಕ 29.01.2022 ರಂದು ಹಮ್ಮಿಕೊಂಡಿದ್ದ 14 ನೇಯ ಆನ್‌ಲೈನ್ ಉಪನ್ಯಾಸ ಮಾಲಿಕೆಯಲ್ಲಿ "ವಚನ ಚಳುವಳಿಯಲ್ಲಿ ಪ್ರಜಾಪ್ರಭುತ್ವದ ಬೇರುಗಳು" ಎಂಬ ವಿಷಯದ ಮೇಲೆ ವಿಚಾರ ಮಂಡನೆ ಮಾಡಿದ ಬೆಂಗಳೂರು ಆಕಾಶವಾಣಿಯ ನಿವೃತ್ತ ನಿರ್ದೇಶಕರಾದ ಡಾ. ಬಸವರಾಜ ಸಾದರ ಅವರು ಕನ್ನಡದ ಶರಣರ ವಚನಗಳಲ್ಲಿಯೇ ಪ್ರಜಾಪ್ರಭುತ್ವದ ಅಂಶಗಳು ಗಾಢವಾಗಿ ಧ್ವನಿತಗೊಂಡಿವೆ ಎಂದು ಹೇಳಿದರು. ಇತ್ತೀಚೆಗೆ ಅಗಲಿದ ಹಿರಿಯ ಕವಿ, ವಿಮರ್ಶಕ ಡಾ. ಚಂದ್ರಶೇಖರ ಪಾಟೀಲ್ ಅವರಿಗೆ (ಚಂಪಾ) ಗೌರವ ನಮನಗಳನ್ನು ಸಲ್ಲಿಸಿ, ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, ತಮ್ಮ ಮಾತಿನಲ್ಲಿ ದಿ. ಚಂದ್ರಶೇಖರ ಪಾಟೀಲ್ ಅವರನ್ನು ನೆನೆಸಿಕೊಂಡ ಅವರು ಪಾಟೀಲ್ ಅವರೊಂದಿಗೆ ತಮ್ಮದು ಕರುಳುಬಳ್ಳಿಯ ಸಂಬಂಧ, ಪ್ರೀತಿ ಇಲ್ಲದ ಮೇಲೆ ನಾನು ಏನನ್ನೂ ಮಾಡುವುದಿಲ್ಲ, ದ್ವೇಷವನ್ನೂ ಕೂಡ ಎಂದವರು ಚಂಪಾರವರು. ಹೊರಗಡೆ ಬಹಳ ಕಠೋರವಾಗಿ ನುಡಿಯುವ ವ್ಯಕ್ತಿತ್ವವಿದ್ದರೂ, ಮನಸ್ಸಿನಿಂದ ತಾಯಿಹೃದಯ ಹೊಂದಿದ್ದವರು ಪಾಟೀಲ್. ಜಾತಿ, ಜನಾಂಗ, ಸಮುದಾಯವನ್ನು ಮೀರಿ ಶರಣ ಸಾಹಿತ್ಯ ಬೆಳೆದಿದ್ದು, ಇದು ಇವತ್ತಿನ ದಲಿತ ಮತ್ತು ಬಂಡಾಯ ಸಾಹಿತ್ಯಗಳಿಗೆ ಪ್ರೇರೇಪಣೆ ದಾಯಕವಾಗಿದ್ದು ಎಂದು ಪಾಟೀಲ್ ಅವರು ಸದಾಕಾಲ ಹೇಳುತ್ತಿದ್ದರು ಎಂಬುದಾಗಿ ಚಂಪಾ ಅವರನ್ನು ಕುರಿತು ಹೇಳಿದರು.

ಮೂರ್ನಾಲ್ಕು ವರ್ಷಗಳ ಹಿಂದೆ ಹಿರಿಯ ಶರಣರಾದ ಶ್ರೀ ಗೋ.ರು. ಚನ್ನಬಸಪ್ಪ ಅವರು ಮತ್ತು ನಾನು ದೆಹಲಿಗೆ ಬಂದಾಗ ಶ್ರೀ ಚಂದ್ರಶೇಖರ್ ಅವರಿಗೆ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಪ್ರದೇಶ ಘಟಕವನ್ನು ಸ್ಥಾಪಿಸಬೇಕೆಂದು ಹೇಳಿದ್ದೆವು ಅದರಂತೆ ದೆಹಲಿ ಘಟಕ ಈಗ ಅಸ್ತಿತ್ವಕ್ಕೆ ಬಂದಿರುವುದು ಸಂತಸವಾಗಿದೆ ಎಂದರು. ಇದರಿಂದ ದೆಹಲಿಯ ಸುತ್ತಮುತ್ತಲಿನ ಕನ್ನಡಿಗರಿಗೆ ಹಾಗೂ ಇತರೆ ರಾಜ್ಯದ ಜನರಿಗೆ ಕನ್ನಡ ನೆಲದ ಶರಣರ ವಿಚಾರಗಳು ತಿಳಿಯುವಂತಾಗಿದೆ.

ಹನ್ನೆರಡನೇ ಶತಮಾನದ ಶರಣರ ವಚನ ಸಾಹಿತ್ಯದಲ್ಲಿ ಲೌಕಿಕ ಮತ್ತು ಧಾರ್ಮಿಕ ಅಂಶಗಳನ್ನು ಸಮತಾವಾದವನ್ನು ಪ್ರತಿಪಾದಿಸುತ್ತವೆ. ಆ ಸಾಹಿತ್ಯವೂ ಕೂಡ ಪ್ರಜಾಸತ್ತಾತ್ಮಕ ಅಂಶಗಳನ್ನು ಹೊಂದಿತ್ತು. ಇವತ್ತಿನ ಭಾರತವೂ ಕೂಡ ಪ್ರಜಾಪ್ರಭುತ್ವದ ದೃಷ್ಟಿಯನ್ನು ಹೊಂದಿದೆ. ಪ್ರಜಾಸತ್ತಾತ್ಮಕ ತತ್ವಗಳೊಂದಿಗೆ ಬದುಕುವುದೇ ಜಂಗಮ, ಇಂತಹ ಸ್ಥಾವರಗಳನ್ನು ಜಂಗಮ ಗೊಳಿಸಿದವರು ನಮ್ಮ ಶರಣರು ಮತ್ತು ವಚನಕಾರರು. ಮನುಕುಲದ ಸಮಾನತೆಯ ತತ್ವ ಸಿದ್ಧಾಂತಗಳನ್ನು ಪ್ರತಿಪಾದಿಸಿದವರೆಲ್ಲರೂ ಈ ಸಮಾಜದಲ್ಲಿ ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧೀಜಿಯಾಗಿದ್ದಾರೆ. ಇವರ ಹೆಸರುಗಳು ಬೇರೆಯಾಗಿವೆ ಹೊರತು ಇವರು ನಡೆದು, ನುಡಿದ ಸಿದ್ಧಾಂತಗಳು ಮಾತ್ರ ಒಂದೇ ಆಗಿವೆ. ಇವನಾರವ, ಇವನಾರವ ಎಂದೆನಿಸದಿರಯ್ಯ ಎಂಬ ಬಸವಣ್ಣನವರ ವಚನದಲ್ಲಿಯೇ ಇವತ್ತಿನ ಪ್ರಜಾಪ್ರಭುತ್ವದ ಮೂಲ ತತ್ವಗಳಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ, ಸಹಬಾಳ್ವೆ, ಎಂಬ ತತ್ವಗಳನ್ನು ಕಾಣಬಹುದು.



ಸರ್ವೇ ಜನೋ ಸುಖಿನೋ ಭವಂತು ಎಂಬ ಸಂದೇಶ ಹೊತ್ತ ಅನೇಕ ಉದಾಹರಣೆಗಳು ವಚನ ಸಾಹಿತ್ಯದಲ್ಲಿ ಹನ್ನೆರಡನೇ ಶತಮಾನದಲ್ಲಿಯೇ ಸಿಗುತ್ತವೆ ಎಂದು ತಮ್ಮ ಭಾಷಣದುದ್ದಕ್ಕೂ ಶರಣರ ವಚನಗಳಲ್ಲಿನ ಅನೇಕ ಸಮತಾವಾದದ ಅಂಶಗಳನ್ನು ಉಲ್ಲೇಖಿಸಿ ತಮ್ಮ ವಿಚಾರಗಳನ್ನು ಮಾರ್ಮಿಕವಾಗಿ ಮಂಡಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ, ಬಾಗಲಕೋಟೆ ಜಿಲ್ಲೆಯ, ಮುಧೋಳ ತಾಲೂಕಿನ ನಿವೃತ್ತ ಶಿಕ್ಷಕರಾದ ಶ್ರೀ ಹನುಮಂತ ಕಲ್ಲಪ್ಪ ಈಟಿ ಅವರು ಮಾತನಾಡಿ "ಶರಣು" ಎಂಬ ಪದವನ್ನೇ ಬೋಧಿಸಿದವರೇ ಶರಣರು, ಶರಣರು ಕೇವಲ ಇದನ್ನ ಬೋಧಿಸಲಿಲ್ಲ ಹೊರತಾಗಿ ಸ್ವತಃ ತಾವೇ ಕಂಡವರಿಗೆಲ್ಲ ಕೈಮುಗಿದು ಶರಣು ಶರಣಾರ್ಥಿಗಳು ಎನ್ನುವುದರ ಮೂಲಕ, ಸಹೋದರ, ಭ್ರಾತೃತ್ವ ಭಾವನೆಯನ್ನು ಮೆರೆಯುವುದರ ಮೂಲಕ ಅದನ್ನು ಆಚರಣೆಗೆ ತಂದು ತೋರಿಸಿದರು. ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲೆಂದು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿಯೂ ಕೂಡ ಇದನ್ನು ಕಟ್ಟಡದ ಹೊರಭಾಗದಲ್ಲಿ ದೊಡ್ಡಕ್ಷರಗಳಲ್ಲಿ ಕೆತ್ತಲಾಗಿದೆ. ಅರಿವೇ ಗುರು ಎನ್ನುವ ತತ್ವ ಅಷ್ಟು ದೊಡ್ಡದಾದ ಸಾಮಾಜಿಕ ತಿಳುವಳಿಕೆಯನ್ನು ಹೇಳಿಕೊಡುತ್ತದೆಂದು ತಮ್ಮ ಭಾಷಣದುದ್ದಕ್ಕೂ ಹಲವಾರು ಶರಣರ ವಚನಗಳ ನಿದರ್ಶನದ ಮೂಲಕ ವಚನ ಸಾಹಿತ್ಯದ ಪಾರಂಪರಿಕತೆಯು ಆಧುನಿಕ ಭಾರತ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯೊಂದಿಗೆ ಹೇಗೆ ಇಂಗಿತವಾಗಿದೆ ಎಂಬುದನ್ನು ತಿಳಿಸಿಕೊಟ್ಟರು.

ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಿದಂತಹ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಶರಣ ಸಾಹಿತ್ಯ ಪರಿಷತ್ತು ದೆಹಲಿ ಘಟಕವು ಶರಣರ ವಿಚಾರಗಳನ್ನು ತಿಳಿಸಿಕೊಡುವುದರ ಮೂಲಕ ಉತ್ತಮ ಕೆಲಸ ಮಾಡಿ ಕೊಡುತ್ತಿದೆ ಎಂದು ಘಟಕದ ಅಧ್ಯಕ್ಷರಿಗೆ ಹಾಗು ಎಲ್ಲ ಪದಾಧಿಕಾರಿಗಳಿಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು. ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಕರ್ನಾಟಕದಲ್ಲಿ ಮಾಡಬೇಕಾದ ಕೆಲಸವನ್ನ ದೆಹಲಿಯಲ್ಲಿದ್ದುಕೊಂಡು ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿ ರುವುದು ಖುಷಿಯ ವಿಷಯ ಎಂದು ಸಂಘಟಕರಿಗೆ ಮತ್ತು ಪದಾಧಿಕಾರಿಗಳಿಗೆ ಸ್ಫೂರ್ತಿ ನೀಡಿದರು.

ಕಾರ್ಯಕ್ರಮದ ಗೌರವ ಉಪಸ್ಥಿತಿಯನ್ನು ವಹಿಸಿದ್ದ ಇನ್ನೋರ್ವ ಅತಿಥಿ ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರಾದ ನವದೆಹಲಿಯ ಜೆ.ಎನ್. ಯು. ನಲ್ಲಿ ಅಂತರರಾಷ್ಟ್ರೀಯ ಕಾನೂನು ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಜಿ. ಹೆಗಡೆಯವರು ಮಾತನಾಡಿ, ಎಪ್ಪತ್ತಮೂರನೆಯ ಗಣರಾಜ್ಯೋತ್ಸವ ಮತ್ತು ಮಹಾತ್ಮ ಗಾಂಧೀಜಿಯವರ ಹುತಾತ್ಮರ ದಿನದ ಅಂಗವಾಗಿ, ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಶರಣರ ವಿಚಾರಗಳನ್ನು ತಿಳಿಸಿಕೊಟ್ಟದ್ದು ಬಹಳ ಔಚಿತ್ಯ ಪೂರ್ಣವಾಗಿದೆ. ಹಿರಿಯ ಸಾಹಿತಿಗಳಾದ ಶ್ರೀ ಗೋ.ರು. ಚನ್ನಬಸಪ್ಪನವರು ಸ್ಥಾಪಿಸಿ, ಸಂರಕ್ಷಿಸಿ, ಬೆಳೆಸಿದ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮದಲ್ಲಿ ಇವತ್ತು ಭಾಗವಹಿಸಿದ್ದು ಖುಷಿಯ ವಿಚಾರ, ಅವರು ಹಾಕಿಕೊಟ್ಟಂತಹ ಸಾಹಿತ್ಯಾತ್ಮಕ ವೇದಿಕೆ ಮತ್ತು ಶರಣರ ವಿಚಾರಗಳ ಪೋಷಣೆ ಜಗತ್ತಿಗೆ ತಿಳಿಯುವಂತಾಗಿದ್ದು, ಸಂವಿಧಾನವು ಸ್ಥಾವರವಾಗಿ ಉಳಿಯಲು ಸಾಧ್ಯವಿಲ್ಲ ಅದೂ ಕೂಡ ಜಂಗಮವಾಗಿರಬೇಕು, 'Living constitution' ಬಗ್ಗೆ ಉಲ್ಲೇಖ ಮಾಡಿದ್ದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹಳ ವಾಸ್ತವಿಕ ನೆಲೆಗಟ್ಟಿನ ಅಂಶವಾಗಿದೆ. ಸಂವಿಧಾನ ರಚನಾ ಸಮಿತಿಯ ಸದಸ್ಯರು ನಮ್ಮ ಶರಣರ ವಿಚಾರಗಳ ಸಮಾನತೆಯ ತತ್ವಗಳನ್ನು ಕೂಡ ತಮ್ಮ ಸಂವಿಧಾನ ಅಧ್ಯಯನದಲ್ಲಿ ನಿದರ್ಶನವಾಗಿ ತೆಗೆದುಕೊಂಡಿದ್ದಾರೆ ಎಂಬುದು ನಮಗೆ ಪ್ರಜಾಪ್ರಭುತ್ವ ಅಂಶಗಳು ತಿಳಿಸಿಕೊಡುತ್ತವೆ ಎಂಬ ಮಹತ್ವದ ಮಾಹಿತಿಗಳನ್ನು ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ, ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಮಾತನಾಡಿ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಿರಿಯ ಸಾಹಿತಿಗಳು ಮತ್ತು ಶರಣ ಸಾಹಿತ್ಯ ಪರಿಷತ್ತಿನ ಗೌರವ ಸಲಹೆಗಾರರಾದ ಶ್ರೀ ಗೋ.ರು. ಚನ್ನಬಸಪ್ಪ ಅವರಿಗೆ ವಂದಿಸುತ್ತಾ, ಪರಿಷತ್ತಿಗೆ ಅವರು ಹಾಕಿಕೊಟ್ಟ ಭದ್ರ ತಳಪಾಯವನ್ನು ನೆನೆಯುತ್ತಾ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಮಾಜದ ಕಟ್ಟಕಡೆಯ ವ್ಯಕ್ತಿ ಕೂಡ ತನ್ನ ನೋವು ನಲಿವುಗಳನ್ನ ವ್ಯಕ್ತಪಡಿಸಲು ಸಂವಿಧಾನ ಅವಕಾಶ ಮಾಡಿಕೊಟ್ಟಿದೆ ಆದರೆ ಈ ರೀತಿಯಾದಂತಹ

ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆ ಇಲ್ಲದಿದ್ದಾಗ, ರಾಜ್ಯ ಸತೆಯ ವ್ಯವಸ್ಥೆಯಲ್ಲಿ ಬದುಕುತ್ತಿದ್ದಂತಹ ಹನ್ನೆರಡನೇ ಶತಮಾನದ ಕನ್ನಡ ನಾಡಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊರತಂದವರು ಬಸವಾದಿ ಶರಣ ಚಿಂತಕರು ಎಂಬುದು ಹೆಮ್ಮೆಯ ವಿಷಯವಾಗಿದೆ. ಹೊರನಾಡ ಕನ್ನಡ ಸಂಘ ಸಂಸ್ಥೆಗಳ ಇಂತಹ ಹಲವಾರು ಕಾರ್ಯಕ್ರಮಗಳ ಮೂಲಕ ನಾವು ನಮ್ಮ ಭಾಷೆಯ ಸ್ವಾರಸ್ಯವನ್ನು ಸೊಗಡನ್ನು ಮುಂದಿನ ಪೀಳಿಗೆಗೆ ತಿಳಿಸುವಂತಹ ಕೆಲಸವನ್ನು ಇನ್ನೂ ಹೆಚ್ಚು ಹೆಚ್ಚು ಮಾಡಬೇಕು ಎಂದರು. ಕಾರ್ಯಕ್ರಮದ ಯಶಸ್ವಿಗೆ ಕಾರಣರಾದ ಸಂಯೋಜಕರಿಗೆ, ಪದಾಧಿಕಾರಿಗಳಿಗೆ, ಭಾಗವಹಿಸಿದ ಗಣ್ಯರಿಗೆ ಅಭಿಮಾನಿಗಳಿಗೆ ಸದಸ್ಯರಿಗೆ ಅಭಿನಂದಿಸುತ್ತಾ ಹರ್ಷವನ್ನು ವ್ಯಕ್ತಪಡಿಸಿದರು.


ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಾಯಕಿ ಶ್ರೀಮತಿ ಶಾಂತಲಾ ಕಿರಣ್ ಅವರು ಅತ್ಯಂತ ಮಧುರವಾಗಿ ವಚನ ಗಾಯನವನ್ನು ನಡೆಸಿಕೊಟ್ಟರು.

ದೆಹಲಿಯ ಮುದ್ದು ಮಕ್ಕಳಾದ ಮಾಸ್ಟರ್ ಕಾವ್ಯಂಶ್, ಕುಮಾರಿ ಶ್ರೇಯಾ ಪ್ರಭಾಕರ್, ಮಾಸ್ಟರ್ ಅಭಿಷೇಕ್ ಉಬಾಳೆ, ಮಾಸ್ಟರ್ ಇಶಾಂತ್ ಗೌಡ, ಕುಮಾರಿ ನೂತನ ಕೈಕಾಡೆ ಮತ್ತು ಮಾಸ್ಟರ್ ಗಗನ್ ಅವರು ತಮ್ಮ ವಚನ ವಾಚನ ಹಾಗೂ ಗಾಯನ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದರು.

ಅಚ್ಚುಕಟ್ಟಾಗಿ ಮೂಡಿ ಬಂದ ಕಾರ್ಯಕ್ರಮವನ್ನು ದೆಹಲಿ ಘಟಕದ ಖಜಾಂಚಿಗಳಾದ ಶ್ರೀ ಶಿವಪ್ಪ ಎಂ ಅವರು ಸುಂದರವಾಗಿ ನಿರೂಪಿಸಿದರು. ಶ್ರೀಮತಿ ಜಯಶ್ರೀ ಬಸವರಾಜ್ ಅವರು ಸ್ವಾಗತಿಸಿದರು. ಶ್ರೀಮತಿ ಸುಜಾತಾ ನಿಂಬಾಳ್, ಶ್ರೀ ಪ್ರಭಾಕರ್ ಮಡ್ಡಿತೋಟ ಮತ್ತು ಶ್ರೀಮತಿ ಆರಾಧನ ಕೆ.ಸಿ. ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶ್ರೀ ಕೆ.ಎಸ್. ಮೂರ್ತಿಯವರು ಕಾರ್ಯಕ್ರಮ ಸಂಯೋಜನೆ ಮಾಡಿದರು. ಕೊನೆಯಲ್ಲಿ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಪ್ರಭು ಪಾಟೀಲ್ ಅವರು ಎಲ್ಲರನ್ನು ವಂದಿಸಿದರು. □

*ಯಲ್ಲಾಲಿಂಗ ಕೊಪ್ಪದ*

## ದಿನಕರ ಫೌಂಡೇಷನ್ ನವದೆಹಲಿಯಿಂದ ಶ್ರೀಕೃಷ್ಣ ಪಾರಿಜಾತ ಬಯಲಾಟ ಬಗ್ಗೆ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮ



ದಿನಕರ ಫೌಂಡೇಷನ್ (ರಿ), ನವದೆಹಲಿ ಇವರು ಅಕ್ಟೋಬರ್ 31ರಂದು ಅಂತರ್ಜಾಲದ ಮೂಲಕ ಹಮ್ಮಿಕೊಂಡಿದ್ದ ಕಾರ್ಯಕ್ರಮ ದಲ್ಲಿ "ಶ್ರೀ ಕೃಷ್ಣ ಪಾರಿಜಾತ ಬಯಲಾಟದ ಇತಿಹಾಸ ಮತ್ತು ವರ್ತಮಾನ" ವಿಷಯದ ಕುರಿತು ಸಾಹಿತಿಗಳು ಹಾಗೂ ಜಾನಪದ ವಿದ್ವಾಂಸರಾದ ಬೀಳಗಿಯ ಡಾ. ಶ್ರೀರಾಮ ಇಟ್ಟಣ್ಣವರ ಉಪನ್ಯಾಸ ನೀಡಿದರು.

ಬಯಲಾಟಗಳ ಬಹುದೊಡ್ಡ ಪರಂಪರೆ ಈ ನಾಡಿನಲ್ಲಿದೆ. ಅವುಗಳಲ್ಲಿ ರಾಧಾನಾಟ, ದೊಡ್ಡಾಟ, ಸಣ್ಣಾಟ ಹೀಗೆ, ಅನೇಕ ಬಯಲಾಟಗಳಲ್ಲಿ ಶ್ರೀಕೃಷ್ಣ ಪಾರಿಜಾತ, ಒಂದು ಸ್ವತಂತ್ರ ಪ್ರಕಾರ. ದೊಡ್ಡಾಟ ಹಾಗೂ ಸಣ್ಣಾಟದಲ್ಲಿ ಒಂದೇ ಪ್ರಕಾರದಲ್ಲಿ ಹಲವು ಬಗೆಯ ಆಟಗಳನ್ನು ಕಾಣಬಹುದಾಗಿದೆ. ಆದರೆ ಶ್ರೀ ಕೃಷ್ಣ ಪಾರಿಜಾತದ ವಿಶೇಷತೆ ಎಂದರೆ ಎಲ್ಲ ಪ್ರಕಾರವೂ ಒಳಗೊಂಡಿದೆ. ಇದರ ಪ್ರಯೋಗ ಪುರಾಣದ ಹಿನ್ನೆಲೆಯಾಗಿ ಬಂದಿದೆ. ಆಟ ಕುಲಗೋಡು ತಮ್ಮಣ್ಣ ಎಂಬುವವರಿಂದ ಅಟ್ಟ ಏರಿತು. ಕುಲಗೋಡ ತಮ್ಮಣ್ಣನಿಗೆ ಕಾವ್ಯದ ಆಧಾರವಿದೆ. ಇದು ಕೀರ್ತನ ಕಾವ್ಯ ಆಧಾರದ ಮೇಲೆ ರಚಿತವಾಗಿದೆ. ಕೀರ್ತನ ಕಾವ್ಯ ರಚಿಸಿದವರು ಅಪರಾಳ ತಮ್ಮಣ್ಣ ಹಾಗೂ ಸಿರಗುಪ್ಪಿ ಸದಾಶಿವಪ್ಪ ಅವರು. ಅಪರಾಳ ತಮ್ಮಣ್ಣ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನವರು. ಆಗಿರುವುದರಿಂದ ಸಹಜವಾಗಿ ಆಂಧ್ರಪ್ರದೇಶದ ಭಾಗದಲ್ಲಿ ಪ್ರಚಲಿತದಲ್ಲಿದ್ದ ಕೂಚುಪುಡಿ ಸೇರಿದಂತೆ ಇತರ ಪ್ರಕಾರಗಳು ಇವರ ಮೇಲೆ ಪ್ರಭಾವ ಬೀರಿರಬಹುದು. ಪಾರಿಜಾತದ ಕಥೆಗಳು ಅನುವಾದದ ಮೂಲಕ ಆಕರವಾಗಿರಬಹುದು ಎಂದು 'ಶ್ರೀರಂಗ' ಅವರು ಹೇಳಿದ್ದಾರೆ.

ಶ್ರೀಕೃಷ್ಣ ಪಾರಿಜಾತವು ಸಂಯುಕ್ತ ಕೃತಿಯಾಗಿದೆ. ಶ್ರೀಕೃಷ್ಣ ಪಾರಿಜಾತ ಕಾವ್ಯವಾಗಿ ಬಹಳಷ್ಟು ಜನಪ್ರಿಯಗೊಂಡಿತ್ತು. ಬೆಳಗಾವಿ ಜಿಲ್ಲೆಯ 'ಕುಲಗೋಡು ತಮ್ಮಣ್ಣ' ಎಂಬುವವರ ದೃಷ್ಟಿಗೆ ಈ ಕಾವ್ಯ ಬೀಳುತ್ತದೆ. ಕಾವ್ಯ ಬರೆದವರು ಅಪರಾಳ ತಮ್ಮಣ್ಣನಾದರೆ, ದೃಶ್ಯ ಪ್ರಪಂಚಕ್ಕೆ ತಂದಂತಹವರು ಜಾವಳಿ ಕವಿಯಾಗಿದ್ದ ಕುಲಗೋಡು ತಮ್ಮಣ್ಣ. ಈ ಕಾವ್ಯ ಅನೇಕ ಜಾನಪದೀಯ ಅಂಶಗಳನ್ನೊಗೊಂಡಿದೆ ಹಾಗೂ ಅನೇಕ ನಾಟಕೀಯ ಗುಣಗಳೂ ಇದರಲ್ಲಿವೆ. ಶ್ರೀಕೃಷ್ಣ ಪಾರಿಜಾತದ ಭಾಷೆ ತುಂಬ ವೈಶಿಷ್ಟ್ಯವನ್ನು ಪಡೆದಿದೆ. ಈ ಕಾರಣದಿಂದಲೇ ಕಾಲಮಾನದ ಯಾವ ಏರಿಳಿತಕ್ಕೂ ಆಹುತಿಯಾಗದೇ, ಪಾರಿಜಾತ ತನ್ನದೇ ಆದ ನೆಲೆ ಕಂಡುಕೊಂಡಿದೆ. ಕಲಾವಿದರಿಗೆ ಇಲ್ಲಿಯ ಭಾಷೆ ಸ್ವಾತಂತ್ರ್ಯ ನೀಡುವುದರಿಂದ ಸಂಭಾಷಣೆಗಳನ್ನು ತೆಗೆಯುವುದಕ್ಕೆ ಮತ್ತು ಸೇರಿಸುವುದಕ್ಕೆ ಸುಲಭವಾಗುತ್ತದೆ. ಇಲ್ಲಿಯ ಸಂಭಾಷಣೆಯ ಸಹಜತೆ ಪ್ರೇಕ್ಷಕರಿಗೆ ಹೆಚ್ಚಿನ ಸಂತೋಷ ನೀಡುತ್ತದೆ. ಧೂತಿ ಅಥವಾ ಭಾಗವತನ ಭಾಷೆ ಸಂದರ್ಭಕ್ಕೆ ತಕ್ಕಂತೆ ಪ್ರಾದೇಶಿಕವಾಗಿ ಕೂಡ ಬದಲಾಗುತ್ತಿರುತ್ತದೆ.

ಶ್ರೀಕೃಷ್ಣ ಪಾರಿಜಾತದಲ್ಲಿ ನವಿರಾದ ಹಾಸ್ಯವಿದೆ. ಕಟಕಿ ಅಥವಾ ವಿಡಂಬನೆಯ ರೂಪದ ಹಾಸ್ಯವು ಬೆಳಗಿನ ತನಕ ನೋಡುವ ಪ್ರೇಕ್ಷಕರಿಗೆ ಚೇತನಾ ಶಕ್ತಿಯನ್ನು ಕೊಡುತ್ತದೆ. ಶ್ರೀಕೃಷ್ಣ ಪಾರಿಜಾತ ಹಾಸ್ಯದ ಕೇಂದ್ರ ಬಿಂದುಗಳು ಭಾಗವತ ಅಥವಾ ಮರಿ ಭಾಗವತ, ಇವರನ್ನೇ 'ಧೂತಿ' ಎಂದು ಕರೆಯುತ್ತಾರೆ. ಆದ್ದರಿಂದ ಗಂಭೀರ ವಿಷಯವನ್ನೂ ಹಾಗೂ ಹಾಸ್ಯವನ್ನೂ ಮುಂದೆ ಮಾಡಿಕೊಂಡೇ ಆಟ ಸಾಗಿಸುತ್ತಾರೆ ಎಂದು ಡಾ. ಇಟ್ಟಣ್ಣವರು ತಮ್ಮ ವಿದ್ವತ್ಪೂರ್ಣ ಉಪನ್ಯಾಸದಲ್ಲಿ ತಿಳಿಸಿದರು. ಅಮರೇಶ್ ಅವರು ಪಾರಿಜಾತ ಹಾಡು ಹೇಳಿದರು. ಅತಿಥಿಗಳ ಪರಿಚಯವನ್ನು ಸಂತೋಷ ಉಪಾಧ್ಯಾಯ ಅವರು ಮಾಡಿಕೊಟ್ಟರು. ದಿನಕರ ಸಂಚಾಲಕರಾದ ಶಿವಾನಂದ ಇಂಗಳೇಶ್ವರ ಅವರು ವಂದಿಸಿದರು.□

*ಅಮರೇಶ*

## ಹುತಾತ್ಮರ ದಿನಾಚರಣೆ

ನವದೆಹಲಿಯ ಕೌಟಿಲ್ಯ ಮಾರ್ಗದಲ್ಲಿರುವ ಕರ್ನಾಟಕ ಭವನದ ಅನೆಕ್ಸ್ ಕಟ್ಟಡದಲ್ಲಿ ರವಿವಾರ ಜ. 30 ರಂದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದವರ ಸ್ಮರಣಾರ್ಥ ಸರಿಯಾಗಿ 11 ಗಂಟೆಗೆ ಎರಡು ನಿಮಿಷಗಳ ಕಾಲ ಮೌನ ಆಚರಣೆ ಮಾಡಿ ನಮನ ಸಲ್ಲಿಸಲಾಯಿತು. ನವದೆಹಲಿಯ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾದ ಶ್ರೀ ಎಚ್. ಪ್ರಸನ್ನ ಅವರು ಮಹಾತ್ಮ ಗಾಂಧೀಜಿಯವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ಕರ್ನಾಟಕ ಭವನದ ಲೆಕ್ಕ ಪತ್ರಾಧಿಕಾರಿ ಪ್ರದೀಪ್ ಕುಮಾರ್, ವೈದ್ಯ ಡಾ.ಕಾರ್ತಿಕ್, ಕಿರಿಯ ಅಭಿಯಂತರಾದ ಶರತ್, ಸಹಾಯಕ ಸಮನ್ವಯಾಧಿಕಾರಿ ಪ್ರದೀಪ್ ಅವರೂ ಸೇರಿದಂತೆ ಕರ್ನಾಟಕ ಭವನದ ಅಧಿಕಾರಿ, ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.□



*ಅಮರೇಶ*

# ದೆಹಲಿ ಕನ್ನಡ ಶಾಲೆಯಲ್ಲಿ 73ನೇ ಗಣರಾಜ್ಯೋತ್ಸವ ದಿನಾಚರಣೆ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ 73ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಅವರು ಧ್ವಜಾರೋಹಣ ನೆರವೇರಿಸಿದರು. ಬಳಿಕ ರಾಷ್ಟ್ರಗೀತೆಯೊಂದಿಗೆ ರಾಷ್ಟ್ರಧ್ವಜಕ್ಕೆ ಗೌರವವನ್ನು ಸಲ್ಲಿಸಿ ಮಾತನಾಡಿದ ಅವರು ಭಾರತೀಯ ಇತಿಹಾಸದಲ್ಲಿ ಅಗಸ್ಟ್ 15, 1947ರಷ್ಟೇ ಮಹತ್ವದ ದಿನ ಜನವರಿ 26, 1950. ದೇಶಕ್ಕೆ ಸಂವಿಧಾನವು ಜಾರಿಗೆ ಬಂದ ದಿನ ಹಾಗೂ ಬ್ರಿಟಿಷರು ರೂಪಿಸಿದ್ದ 'ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್ 1935' ಬದಲಿಸಿದ ಸುದಿನವಿದು. ನಮ್ಮ ಇಂದಿನ ಗೌರವಯುತವಾದ ಅರ್ಥಪೂರ್ಣ ಜೀವನಕ್ಕೆ ಸಂವಿಧಾನವೇ ದಾರಿದೀಪವಾಗಿದೆ. ಈ ಚರಿತ್ರಾರ್ಹ ದಿನದ ನೆನಪಿಗಾಗಿ ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ. ಸಂವಿಧಾನ ನೀಡಿದಂತಹ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಪರಿಕಲ್ಪನೆಗಳನ್ನು ಗೌರವಿಸುವುದರ ಜೊತೆಗೆ ಪರಿಪಾಲಿಸಿ ಸದೃಢ ದೇಶ ನಿರ್ಮಾಣದತ್ತ ಕೈಜೋಡಿಸೋಣ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕ – ಶಿಕ್ಷಕೇತರ ವೃಂದದವರು ಉಪಸ್ಥಿತರಿದ್ದರು. ಉಪನ್ಯಾಸಕರಾದ ಬಲಬೀರ್ ಸಿಂಗ್ ವಂದಿಸಿದರು. ಶಿಕ್ಷಕರಾದ ಎಂ. ಎಸ್. ಲಾವಣ್ಯ ಕಾರ್ಯಕ್ರಮ ನಿರೂಪಿಸಿದರು. □

**ಅರವಿಂದ ಬಿಜ್ಜೈ**

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದಿಂದ ಗಣರಾಜ್ಯೋತ್ಸವ ಆಚರಣೆ



ದೆಹಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ (ರಿ) ವತಿಯಿಂದ ಕರ್ನಾಟಕ ಸಂಘದ ವಾಚನಾಲಯದಲ್ಲಿ ಜನವರಿ 26 ರಂದು ಭಾರತದ ಗಣರಾಜ್ಯೋತ್ಸವವನ್ನು ಆಚರಣೆ ಮಾಡಲಾಯಿತು.

ಇದೇ ದಿನ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಲಿದಾನದ ದಿನವನ್ನು ದೀಪ ಬೆಳಗಿಸಿ ಪುಷ್ಪಾರ್ಚನೆಯನ್ನು ಮಾಡುವ ಮೂಲಕ ಆಚರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಸಂಗೊಳ್ಳಿ ರಾಯಣ್ಣ ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಕನ್ನಡದ ಬಂಧುಗಳು ಪಾಲ್ಗೊಂಡಿದ್ದರು.

ಮುಖ್ಯ ಅತಿಥಿಗಳಾದ ಡಾ. ಶ್ರೀಧರ್ ರೆಡ್ಡಿಯವರು ಮಾತನಾಡಿ ಸಂಗೊಳ್ಳಿ ರಾಯಣ್ಣರವರು ಭಾರತ ದೇಶ ಕಂಡ ಅಪ್ರತಿಮ ವೀರ. ಯಾವುದೇ ಸ್ವಾರ್ಥ ಭಾವನೆ ಇಲ್ಲದೆ ದೇಶಕ್ಕಾಗಿ ತನ್ನ ಪ್ರಾಣ ಕೊಟ್ಟಂತಹ ಪರಮವೀರ. ಬ್ರಿಟೀಷರನ್ನು ತನ್ನ ಗೊರಿಲ್ಲಾ ಯುದ್ಧ ನೀತಿಯಿಂದ ಕಿತ್ತೂರಿನಿಂದ ದೂರ ಇಟ್ಟಂತಹ ಮಹಾ ಪರಾಕ್ರಮಿ. ಇಂತಹ ಮಹಾ ಶೂರನ ಬಲಿದಾನದ ದಿನವೇ ನಮ್ಮ ಭಾರತ ದೇಶದ ಗಣರಾಜ್ಯೋತ್ಸವವನ್ನು ಆಚರಿಸುವುದು ಕೂಡಾ ಒಂದು ಸೌಭಾಗ್ಯವೇ ಸರಿ.

ಇಂತಹ ವೀರರನ್ನು ಮತ್ತು ಅವರ ಪರಾಕ್ರಮವನ್ನು ದೇಶದ ಎಲ್ಲಾ ಜನರಿಗೂ ತಿಳಿಯುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ನಮ್ಮ ಕರ್ನಾಟಕದ ಕ್ರಾಂತಿಕಾರಿಗಳ ಬಗ್ಗೆ ಎಲ್ಲರಿಗೂ ತಿಳಿಸಬೇಕೆಂದು ಹೇಳಿದರು.

ಇದೇ ಸಂದರ್ಭದಲ್ಲಿ ಗೌರವ ಅಧ್ಯಕ್ಷರಾದ ಡಾ. ಮುನಿರಾಜುರವರು ಮಾತನಾಡಿ ಕರ್ನಾಟಕದ ಎಲ್ಲಾ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿಗಳ ಬಗ್ಗೆ ಎಲ್ಲರಿಗೂ ಪರಿಚಯಿಸುವ ಕಾರ್ಯವನ್ನು ನಾವು ಮುಂದೆ ಮಾಡುತ್ತೇವೆ ಎಂದು ಹೇಳಿದರು.

ಕಾರ್ಯದರ್ಶಿಗಳಾದ ಎಸ್.ಡಿ. ಶ್ರೀನಿವಾಸ್‌ರವರು ಕಾರ್ಯಕ್ರಮಕ್ಕೆ ಬಂದಂತಹ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. □

**ಆರ್. ಮಹಾದೇವ್**

# ನವದೆಹಲಿಯ ಕರ್ನಾಟಕ ಭವನದಲ್ಲಿ ಗಣರಾಜ್ಯೋತ್ಸವ ಆಚರಣೆ



ನವದೆಹಲಿಯ ಸರ್ದಾರ ಪಟೇಲ ಮಾರ್ಗದಲ್ಲಿರುವ ಕರ್ನಾಟಕ ಭವನ–2ರ ಶರಾವತಿಯಲ್ಲಿ ಕರ್ನಾಟಕ ಭವನದ ವತಿಯಿಂದ 73ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ಜ. 26ರಂದು ಆಚರಿಸಲಾಯಿತು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಡಾ. ಅಮಿತಾ ಪ್ರಸಾದ್ ಅವರು ಗಣರಾಜ್ಯೋತ್ಸವದ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾದ ಶ್ರೀ ಎಚ್. ಪ್ರಸನ್ನ ಹಾಗೂ ಅಧಿಕಾರಿ, ಸಿಬ್ಬಂದಿ ಉಪಸ್ಥಿತರಿದ್ದರು. □

**ಅಮರೇಶ**

# ಗೋಕರ್ಣ ಮಂಡಲ ಇನ್ ವೆಬ್‌ಸೈಟ್ ಲೋಕಾರ್ಪಣೆ

ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಅಂತರ್ಜಾಲೀಯ ಕಾರ್ಯಕ್ರಮದಲ್ಲಿ ಗೋಕರ್ಣಮಂಡಲ. ಇನ್ ವೆಬ್‌ಸೈಟ್ ಅನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಕರ್ನಾಟಕ ಸರ್ಕಾರದ ತೆರಿಗೆ ವಿಭಾಗದ ನಿವೃತ್ತ ಜಂಟಿ ಆಯುಕ್ತರು ಮತ್ತು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿರುವ ಶ್ರೀಯುತ ಸುಬ್ರಾಯ ಎಂ. ಹೆಗಡೆ ಗೌರಿಬಣ್ಣಿಗೆ ಯವರು ಗೋಕರ್ಣಮಂಡಲ ವೆಬ್‌ಸೈಟ್‌ನ್ನು ಉದ್ಘಾಟಿಸಿ ಇ-ಗೋಕರ್ಣವಾಣಿಯನ್ನು ಲೋಕಾರ್ಪಣೆಗೊಳಿಸಿದರು. ವೆಬ್‌ಸೈಟ್‌ನಲ್ಲಿನ ಇ-ಗೋಕರ್ಣವಾಣಿಯನ್ನು ಶ್ಲಾಘಿಸಿದ ಅವರು ಗೋಕರ್ಣವಾಣಿಯು ಉತ್ಕೃಷ್ಟ ಲೇಖನಗಳನ್ನೊಳಗೊಂಡಿದೆ. ನಮ್ಮ ಪರಂಪರೆ, ತಿಂಡಿ-ತಿನಿಸುಗಳು, ಹಬ್ಬ-ಹರಿದಿನಗಳು, ಆಚಾರ-ವಿಚಾರಗಳು, ಅಡಿಕೆ-ಕೊಯ್ಲು, ಆಲೆಮನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಲೇಖನಗಳು ಹೆಚ್ಚು ಹೆಚ್ಚು ಪ್ರಕಟವಾಗಲಿ. ಇವು ಮುಂದಿನ ತಲೆಮಾರಿನ ಇತಿಹಾಸತಜ್ಞರಿಗೆ ಅಧ್ಯಯನದ ವಸ್ತುವಾಗುವಂತಿರಲಿ ಎಂದು ಅವರು ಸಲಹೆಯಿತ್ತರು.

ಗೋಕರ್ಣ ಮಂಡಲದ ಸ್ಥಾಪಕ ಸದಸ್ಯರುಗಳಲ್ಲೊಬ್ಬರಾದ ಶ್ರೀಯುತ ನಾರಾಯಣ ಜೋಯಿಸ ಅವರು ಎಂಭತ್ತರ ದಶಕದ ನೆನಪುಗಳನ್ನು ಮೆಲುಕು ಹಾಕುತ್ತ ದೆಹಲಿ ಕನ್ನಡ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕರಾಗಿ ಸೇರಿದ ನಂತರ ಶ್ರೀಯುತ ಈಶ್ವರ ಭಟ್, ಶ್ರೀಯುತ ಗೋಪಾಲ ಕಡೆಕೊಡಿ, ಶ್ರೀಯುತ ರಾಮಚಂದ್ರ ಭಟ್, ಶ್ರೀಯುತ ಅಡ್ಕೋಳಿ ಮತ್ತಿತರ ಹಿರಿಯ ಸದಸ್ಯರೊಂದಿಗಿನ ಒಡನಾಟ ಮತ್ತು ಗೋಕರ್ಣಮಂಡಲದ ಸ್ಥಾಪನೆಯಾದ ಬಗ್ಗೆ ವಿಸ್ತೃತವಾಗಿ ವಿವರಿಸಿದರು. ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಹವ್ಯಕ ಮಹಾಸಭಾದ ಪದಾಧಿಕಾರಿಗಳು, ಸದಸ್ಯರು, ಗೋಕರ್ಣಮಡಲದ ಎಲ್ಲಾ ಪದಾಧಿಕಾರಿಗಳು



ಮತ್ತು ಸದಸ್ಯರು, ದೆಹಲಿಯ ಕನ್ನಡಿಗರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯದರ್ಶಿಗಳಾದ ಶ್ರೀ ಗಣೇಶ ಹೆಗಡೆ ಕಾರ್ಯಕ್ರಮವನ್ನು ನಿರೂಪಿಸಿದರು. ಅಧ್ಯಕ್ಷರಾದ ಶ್ರೀಮತಿ ಶಾಲಿನಿ ಪ್ರಶಾಂತ್ ಸ್ವಾಗತಿಸಿದರು. ಕೋಶಾಧಿಕಾರಿಗಳಾದ ಶ್ರೀಮತಿ ಲಲಿತಾ ಹೆಗಡೆ ವಂದಿಸಿದರು. ▫

***ಗಣೇಶ ಹೆಗಡೆ***

# ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದಿಂದ ಗಣರಾಜ್ಯೋತ್ಸವ ಸಂದರ್ಭದಲ್ಲಿ 'ನನ್ನ ದೇಶ ನನ್ನ ಉಸಿರು' ಕಾರ್ಯಕ್ರಮ

73ನೇ ಗಣರಾಜ್ಯೋತ್ಸವ ಆಚರಣೆ ಅಂಗವಾಗಿ ಮಕ್ಕಳಲ್ಲಿ ದೇಶಪ್ರೇಮ ಹಾಗೂ ದೇಶಸೇವೆಯ ಮಹತ್ವವನ್ನು ಸಾರುವ 'ನನ್ನ ದೇಶ ನನ್ನ ಉಸಿರು' ಕಾರ್ಯಕ್ರಮವನ್ನು ಅಂತರ್ಜಾಲದ ಮೂಲಕ ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಎಸ್.ಆರ್. ಹಿರೇಮಠ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ಕಳೆದ 40 ವರ್ಷಗಳಲ್ಲಿ ಗ್ರಾಮೀಣಾಭಿವೃದ್ಧಿ, ಪರಿಸರ, ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಟ ಮಾಡಿ ಬಂದ ನನಗೆ ಬಾಲ್ಯದಲ್ಲಿಯೇ ಶಿವರಾಮ ಕಾರಂತರ ಚಿಂತನೆಗಳು ಪ್ರಭಾವ ಬೀರಿದ್ದವು ಹಾಗೂ ನನ್ನ ಮುಂದಿನ ಜೀವನವನ್ನು ರೂಪಿಸಲು ಸಹಕಾರಿಯಾಯಿತು. ಮಾತೃಋಣ, ಪಿತೃಋಣದಂತೆ ಅತಿ ಮಹತ್ವದ ಋಣ ಸಮಾಜ ಋಣ. ನಮಗೆ ಎಲ್ಲ ಸೌಕರ್ಯಗಳನ್ನು ಒದಗಿಸಿ ಕೊಡುವ ಸಮಾಜವೇ ನಮ್ಮ ವ್ಯಕ್ತಿತ್ವವನ್ನು ರೂಪಿಸುವುದು. ಪ್ರಜಾಪ್ರಭುತ್ವ ಎನ್ನುವುದು ಆಡಳಿತ ವ್ಯವಸ್ಥೆಯ ಒಂದು ಅತಿ ಆದರ್ಶವೆಂಬುವುದು ಬಹಳ ಶತಮಾನಗಳಿಂದಿದೆ. ಹನ್ನೆರಡನೇ ಶತಮಾನದಲ್ಲಿದ್ದ ಅನುಭವ ಮಂಟಪವು ನಮ್ಮ ಜೀವನದ ಬಗ್ಗೆ ಅನುಭವಗಳನ್ನು ಹಂಚಿಕೊಳ್ಳುವ ಒಂದು ಉತ್ಕೃಷ್ಟವಾದ ವೇದಿಕೆಯಾಗಿತ್ತು.

ಸ್ವಾತಂತ್ರ್ಯದ ಸುದೀರ್ಘ ಹೋರಾಟದ ನಂತರ ನಮ್ಮ ಹಿರಿಯರು ಕೊಟ್ಟ ದೊಡ್ಡ ಕೊಡುಗೆಯೇ ಸಂವಿಧಾನ. ಎಲ್ಲ ಕಾಯ್ದೆಗಳ ಮೂಲ ಸಂವಿಧಾನ. ಆರ್ಟಿಕಲ್ 32ರಲ್ಲಿ ನಮಗಿರುವ ಸಮಗ್ರವಾದ ಹಕ್ಕಿನ ಉಲ್ಲೇಖವಿದೆ. ನಾವು ಈ ದೇಶದ ಯೋಗ್ಯ ನಾಗರೀಕರಾಗಿ, ಸಂವಿಧಾನವನ್ನು ಅರಿತು ಅದನ್ನು ಕಾಪಾಡಿಕೊಳ್ಳುವ ದೃಢಸಂಕಲ್ಪ ಮಾಡಿಕೊಂಡು ಮತ್ತು ನಮ್ಮ ಜೀವನಕ್ಕೆ ಅರ್ಥ, ಸಂತೃಪ್ತಿ ಪಡೆಯುವಂತಹ ನಿರ್ಣಯದ ಕಡೆ ಹೋಗಬೇಕೆಂದು ಹೇಳಿದರು.

ದೆಹಲಿ, ಗುರುಗಾಂವ್ ಹಾಗೂ ಭಿವಾಡಿಯಿಂದ ಸುದೀತಿ ಅಂಬಳೆ, ಭುವನ್ ಸೂರಜ್, ಸಂಚಿತಾ ಆರ್. ನೀಲೂರ, ಮೊಹಮ್ಮದ್ ಸಾಹಿಲ್, ವರ್ಣಿಕಾ, ಹಾಸಿನಿ ಎಸ್., ನಂದಿತಾ ಉಭಾಳೆ, ವಿಧಿ ಕೊಠಾರಿ ಮತ್ತು ವಿಧಾನ್ ಕೊಠಾರಿ, ಹರ್ಷಿತಾ ಉಭಾಳೆ, ಸುಮಂತ್ ಆಚಾರ್ಯ, ಕೃಷ್ಣಾ ಘಾಳೆ, ಅಭಿಷೇಕ್ ಉಭಾಳೆ, ಶ್ರೀದಾ ಅಂಬಳೆ, ಕಾರ್ತಿಕ್ ಆಚಾರ್ಯ, ಸಾಯಿಶ್ರೀ ದೇಸಾಯಿ, ಜೈನಬ್, ಪ್ರಥಮ ಜೆ.ಎನ್., ದಿವ್ಯಶ್ರೀ, ಪ್ರೇಮ್ ಲದ್ದೆ, ಅಂಕಿತಾ ಲದ್ದೆ ಮತ್ತು ಶಿಖಾ ಘಾಳೆ, ಅಮೃತ, ಚಿನ್ಮಯಿ, ಧೈರ್ಯ ಜೇವೂರ್ ಸೇರಿದಂತೆ ಒಟ್ಟು 22 ವಿದ್ಯಾರ್ಥಿಗಳು ಭಾಗವಹಿಸಿ ದೇಶಭಕ್ತಿಗೀತೆ, ವಿಚಾರಧಾರೆ, ನೃತ್ಯ, ಅಭಿನಯ ಹೀಗೆ ವಿವಿಧ ದೇಶಭಕ್ತಿಯನ್ನು ಬಿಂಬಿಸುವ ವೈವಿಧ್ಯಮಯ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಕಾರ್ಯಕ್ರಮದಲ್ಲಿ ಪರಿಷತ್ತಿನ ಗೌರವಾಧ್ಯಕ್ಷರಾದ ಪಿ. ಜಯರಾಜ್, ಅಧ್ಯಕ್ಷರಾದ ಅರವಿಂದ ಬಿಜ್ಜೈ, ಪರಿಷತ್ತಿನ ಕೇಂದ್ರ ಘಟಕದ ನಿರ್ದೇಶಕರಾದ ಸಿ. ಅರುಣ್, ಪರಿಷತ್ತಿನ ಪದಾಧಿಕಾರಿಗಳು, ಪೋಷಕರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಲಾವಣ್ಯ ಎಂ.ಎಸ್. ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾರ್ಯಕ್ರಮದ ಸಂಯೋಜಕರಾದ ಸುಜಾತ ನಿಂಬಾಳ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಯಲ್ಲಾಲಿಂಗ ಕೊಪ್ಪದ ಅತಿಥಿಗಳನ್ನು ಪರಿಚಯಿಸಿದರು. ಖಜಾಂಚಿ ರಾಮಚಂದ್ರ ಉಭಾಳೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಗೋಪಾಲಕೃಷ್ಣ ಭಟ್ ಸಹಕರಿಸಿದರು. ಉಪಾಧ್ಯಕ್ಷರಾದ ಮಾಲಿನಿ ಪ್ರಹ್ಲಾದ್ ವಂದಿಸಿದರು. ಕು। ಸುಷ್ಮಾ ನಿಂಬಾಳ್ ಮತ್ತು ಕು। ಅವನಿ ನೆಲ್ಲಿ ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ▫

***ಅರವಿಂದ ಬಿಜ್ಜೈ***

## ವರ್ಷಾಗಮನದ 'ಹರುಷ'




'ವರ್ಷಾಗಮನದ ಹರುಷ'
ಕಡಿದಾದ ದಾರಿಯ
ಮೂಲಕ ಮನೆ ತಲುಪಬೇಕು,
ದೊಯ್ಯೆಯೆಂದು ಸುರಿಯುತ್ತಿರುವ ಮಳೆ
ನಡುನಡುವೆ ಜೋರಾಗಿ ಸದ್ದು ಮಾಡಿ
ಅರೆಗಳಗೆ ಜಿಟಿಯಾಗಿ ಹತ್ತಿಕೊಳ್ಳುವ ಈ ಮಳೆ
ನೆಲಕ್ಕೆ ಹಸಿರನ್ನೇ ಹೊದ್ದು ತರುವುದು.
ಕೊಡೆಯನ್ನೇ ಆಶ್ರಯಿಸಿ ಸಾಗಬೇಕು
ಮಳೆಯಲ್ಲಿ ನೆಂದು ಖುಷಿ ಪಡುವ ಉತ್ಸಾಹ ಒಂದೆಡೆ
ಉಮ್ಮಳಿಸಿದರೆ,
ಕಾಯಿಲೆ ಬಿದ್ದರೆ ಮನೆಯಲ್ಲಿ ಅಜ್ಜ-ಅಜ್ಜಿ
ನೋಡಿಕೊಳ್ಳಬೇಕಲ್ಲ ಎಂಬ
ಕನವರಿಕೆಯೊಂದಿಗೆ ಭಯವನ್ನಾವರಿಸಿದ ಮನಸ್ಸಿಗೆ
ಮಗದೊಮ್ಮೆ ಈ ಸಂದರ್ಭ ಒದಗಿ ಬರುವುದೆ ಎಂದು
ಕನವರಿಸೊ ಮನದ ಮುದ್ದಾದ ಕಲ್ಪನೆಯೊಂದು,
ಸುರಿವ ಮಳೆಗೆ ನನ್ನನ್ನು ಕಾಪಾಡಿಕೊಳ್ಳುವುದು ಹೇಗೆಂಬ
ಚಿಂತೆಯ ಗೊಂದಲದಲ್ಲಿ ಹಿರಿಯರ ನುಡಿ ಸುಳ್ಳಲ್ಲ
ಎಂಬ ಮನವರಿಕೆಯಾದ ಮಾತು ಸ್ಮೃತಿಯಲ್ಲಿದೆ.
ಕೆರೆಯೊಳಗಿನ ಮೀನೊಂದು ನೆಗೆಯುತ
ಖುಷಿಯಿಂದ ನನ್ನ ನೋಡಿ ಏನೋ
ಹೇಳುತಿದೆ ಎಂಬ ಹರುಷ ಮನದಿ
ಮನೆ ಮಾಡಿದ ಸಲುವಾಗಿ
ಎನ್ನ ಕರಕುಂಚದಿ ಹೊರಹೊಮ್ಮಿದ ಚಿತ್ರವಿದು...

***ಚಿತ್ರ ಬರಹ: ಅಮರೇಶ***

(ಧನ್ವಿನ್‌ನ ಕಲ್ಪನಾ ಲಹರಿಯಲ್ಲಿ ಮೂಡಿ ಬಂದ ಚಿತ್ರವಿದು.)

## ಅಭಿಮತ ಓದುಗರ ಅನಿಸಿಕೆ




ಜನವರಿ 'ಅಭಿಮತ' ಸಂಚಿಕೆ ಕೈಸೇರಿತು. ಈ ತಿಂಗಳಿನಲ್ಲಿ ವೈವಿಧ್ಯಮಯ ಹಾಗೂ ವಿಷಯಪೂರ್ಣ ಸಂಚಿಕೆ ನನ್ನಂತೆಯೂ ಅಭಿಮತ ಓದುಗರಿಗೆ ಹಿಡಿಸಿರಬಹುದು. ಕಾರ್ಯದರ್ಶಿಗಳ ಅಂಕಣ ಬರಹ ಈ ಬಾರಿಯೂ ಚಿಕ್ಕದಾಗಿ ಹಾಗೂ ಚೊಕ್ಕದಾಗಿ ವಿಷಯ ಪ್ರಭುತ್ವ ಸಹಿತ ಮಂಡಿಸಿದ್ದು ಸಂತೋಷ. ಅಕವಿತೆ ಮತ್ತು ದೊಂಬರಾಟ ಪ್ರಕಟಗೊಂಡ ಕವನಗಳು ದೆಹಲಿ ವಲಯದ ಸಾಂಸ್ಕೃತಿಕ ಮತ್ತು ಸಾಹಿತ್ಯದ ಅಭಿರುಚಿಯ ಧ್ಯೋತಕವೆನಿಸಿ, ಯುವ ಬರಹಗಾರರಿಗೆ ಸ್ಫೂರ್ತಿ ಸೆಲೆಯಾಯಿತು. ಅಭಿಮತ ಸಂಚಿಕೆ ಮುಖಪುಟ ಅರ್ಥಪೂರ್ಣವಾಗಿಸುವಲ್ಲಿ ವಿನ್ಯಾಸ ಮಾಡಬಹುದೆನಿಸಿತು. ದೆಹಲಿ ಕರ್ನಾಟಕ ಸಂಘ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡುವತ್ತ ಚಿಂತಿಸಬಹುದಾಗಿದೆ. ಒಟ್ಟಾರೆ ಅಭಿಮತ ಸಂಚಿಕೆಯು ಸಮಗ್ರ ವಿಷಯ ಒಳಗೊಂಡಿದೆ. ಜನವರಿ ಸಂಚಿಕೆಯ ಬಹುತೇಕ ಲೇಖನಗಳು ಉಪಯುಕ್ತ ಎನಿಸಿತು. ಸಂಪಾದಕರಿಗೆ ಧನ್ಯವಾದಗಳು.

**ನಮ್ರತಾ**

Sir, this month's Abhimatha is an excellent publication. Each and every event of Delhi Karnataka Sangha covered. My big salute to your wisdom. I am greatly missing Delhi and your association sir. Best regards ever.

**By Venkatesh, Army**

ನವೆಂಬರ್, ಡಿಸೆಂಬರ್ ಮತ್ತು ಜನವರಿ ತಿಂಗಳ ಅಭಿಮತ ಸಂಚಿಕೆಗಳನ್ನು ಓದಿದೆ. ನಿಜಕ್ಕೂ ಆಶ್ಚರ್ಯ ಆಯಿತು.

ಎಷ್ಟೊಂದು ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಿ ಅವೆಲ್ಲವನ್ನು ಸಮರ್ಪಕವಾಗಿ ಸಂಯೋಜಿಸಿ ಸುಂದರವಾಗಿ ಹೊರ ತಂದಿದ್ದಾರೆ. ಅಭಿಮತ ಸಂಪಾದಕ ಮಂಡಳಿಗೆ ಅಭಿನಂದನೆಗಳು.

ದೆಹಲಿ ಕರ್ನಾಟಕ ಸಂಘ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಸಂಘದ ಸಮಿತಿಯ ಸದಸ್ಯರು ಬಹಳ ಶ್ರಮಿಸಿರುವುದಲ್ಲದೆ ಅವರ ಕುಟುಂಬದವರು ವಿಶೇಷವಾಗಿ ಮಕ್ಕಳು ಎಲ್ಲಾ ಚಟುವಟಿಕೆಗಳಲ್ಲಿ ಉತ್ಸಾಹ ಪೂರ್ವಕವಾಗಿ ಪಾಲುಗೊಳ್ಳುತ್ತಿರುವುದನ್ನು ಕಂಡು ಹೆಮ್ಮೆ ಆಗುತ್ತಿದೆ. ಪುನೀತ್ ನಮನ ಓದಿ ಕಣ್ಣೀರು ತಾನಾಗೇ ಹರಿದು ಬಂದಿತು... ಅಷ್ಟು ಮನಮುಟ್ಟುವಂತಿತ್ತು.

ಶುಭಾಶಯಗಳು.

**ಡಾ. ದಮಯಂತಿ**

ಬೆಂಗಳೂರು

## ಕನ್ನಡ ನಾಟಕ ಮೊದಲ ಗುರು ಶಾಂತ ಕವಿ

ದಿನಕರ ಫೌಂಡೇಷನ್ (ರಿ), ನವದೆಹಲಿ ನಿಸ್ತಂತು ಮಾಧ್ಯಮದ ಮೂಲಕ ಹಮ್ಮಿಕೊಂಡಿದ್ದ ಕನ್ನಡ ನಾಟಕ ಮೊದಲ ಗುರು ಶಾಂತ ಕವಿಯ (ಸಕ್ಕರಿ ಬಾಳಾಚಾರ್ಯರು) ಕುರಿತಾಗಿ ಸಾಹಿತಿ, ಜಾನಪದ ವಿದ್ವಾಂಸರು ಹಾಗೂ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಿಜಯಪುರದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಮಾತನಾಡುತ್ತ ಸುಮಾರು 175 ವರ್ಷಗಳ ಹಿಂದೆ ಹುಟ್ಟಿದ, 150 ವರ್ಷಗಳ ಹಿಂದೆ ನಾಟಕಗಳನ್ನು ಪ್ರದರ್ಶಿಸಿದಂತಹ ಬಾಳಾಚಾರ್ಯರು ಹೊಸಗನ್ನಡದ ಪ್ರತಿಭಾನ್ವಿತರು. ವಿದ್ವತ್ ಪರಂಪರೆಯಿಂದ ಬೆಳೆದು ಮಠದಲ್ಲಿ ಕನ್ನಡವನ್ನು ಕಲಿತು ಕನ್ನಡವನ್ನು ಕಟ್ಟಿದ್ದು, ಬಾಲ್ಯದಲ್ಲಿಯೇ ಭಾಗವತರಾಟ, ಗೀಗೀ ಪದ ಗಳ ಬಗ್ಗೆ ಅದು ಕೆಲಸವಿಲ್ಲದ ಹುಂಬ ಜನರ ಆಟವೆಂದು ಮಡಿವಂತರು ಮೂದಲಿಸುತ್ತಿದ್ದ ವಾತಾವರಣದಲ್ಲಿ ಕೂಡ ಅವುಗಳಲ್ಲಿ ಇವರು ತೋರುತ್ತಿದ್ದ ಆಸಕ್ತಿ, ಸಂಬಳಕ್ಕೆ ಶಾಲೆಯಲ್ಲಿ ಮಾಸ್ತರಿಕೆ, ಉಳಿದ ಸಮಯದಲ್ಲಿ ಸಂಗೀತ, ನಾಟಕಗಳ ಆರಾಧನೆ. ಕನ್ನಡ ಪಂಡಿತರಾಗಿದ್ದ ಶಾಂತವೀರ ರಾಚದೇವ ಕಿತ್ತೂರರ ಸಂಪರ್ಕದಿಂದ ಕಾವ್ಯಾಸಕ್ತಿ ಮೂಡಿತು.

ಆ ಕಾಲದಲ್ಲಿ ಅತ್ಯಂತ ಮಹತ್ವದ ಮನರಂಜನೆಯ ಕಾರ್ಯಕ್ರಮವಾಗಿದ್ದದ್ದು ಕೀರ್ತನೆ. ಕೀರ್ತನಕಾರರೊಬ್ಬರು ಕೀರ್ತನೆಯೊಂದನ್ನು ನುಡಿಸುತ್ತಿದ್ದ ಒಂದು ಸಂದರ್ಭದಲ್ಲಿ ಕೀರ್ತನೆಯಲ್ಲಿ ಮರಾಠಿ ಮಿಶ್ರಿತ ಕನ್ನಡವನ್ನು ಕೇಳಿ ಇದೇನು ಮರಾಠಿ ಕೀರ್ತನೆಯೋ? ಕನ್ನಡ ಕೀರ್ತನೆಯೋ? ಎಂಬ ಬಾಳಾಚಾರ್ಯರ ಪ್ರಶ್ನೆಗೆ ಕನ್ನಡದ ಕುರಿತಾದ ನಕಾರಾತ್ಮಕ ಪ್ರತಿಕ್ರಿಯೆ ದೊರೆತಾಗ ಬಾಳಾಚಾರ್ಯರಲ್ಲಿ ಕನ್ನಡ ಜಾಗೃತಿ ಒಡಮೂಡಿ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಲು ಮುಂದಾದರು. ಶಾಂತೇಶ ವಿಠಲ, ಶಾಂತ ವಿಠಲ ಎಂಬ ಮುದ್ರಿಕೆಯಿಂದ ಹಲವಾರು ದೇವರನಾಮ, ಕೀರ್ತನೆ, ಪದಪದ್ಯಗಳನ್ನು ರಚಿಸಿ ಶಾಂತ ಕವಿಯೆಂದೇ ಪ್ರಸಿದ್ಧರಾಗಿ ನವಕರ್ನಾಟಕ ನಿರ್ಮಾಣಕ್ಕೆ ನಾಂದಿಯನ್ನು ಹಾಡಿದರು. ಕೀರ್ತನೆಯ ಮೂಲಕ ಕನ್ನಡಿಗರಿಗೆ ಇತಿಹಾಸವನ್ನು ಹೇಳುವ ಪ್ರಯತ್ನ ಮಾಡಿದವರಲ್ಲಿ ಶಾಂತ ಕವಿಗಳೇ ಮೊದಲಿಗರು. ಇದೇ ಮುಂದೆ ನಾಟಕ ರಚನೆಗೆ ನಾಂದಿಯಾಯಿತು. ಕನ್ನಡವನ್ನು ಕಟ್ಟುವುದಕ್ಕಾಗಿಯೇ ನಾಟಕಗಳನ್ನು ರಚಿಸಿದ ಶಾಂತ ಕವಿ ಕನ್ನಡದ ಮನೆಮನೆಗೆ ಹೋಗಿ ತನ್ನ ಜೋಳಿಗೆಯನ್ನು ತೆರೆದವರು ಎಂದು ಹೇಳಿದರು.

ವಿದ್ವಾನ್ ಶಂಭು ಭಟ್, ಕೋಟ ಹಾಗೂ ರಾಘವೇಂದ್ರ ಭಟ್, ಕೋಟ ಅವರು ಆರಂಭದಲ್ಲಿ ಶಾಂತ ಕವಿಗಳ ರಂಗಗೀತೆಯನ್ನು ಪ್ರಸ್ತುತಪಡಿಸಿದರು. ಶ್ರೀಮತಿ ಸವಿತಾ ನೆಲ್ಲಿ ಅವರು ಅತಿಥಿಗಳನ್ನು ಪರಿಚಯಿಸಿದರು. ತಾಂತ್ರಿಕ ನಿರ್ವಹಣೆಯಲ್ಲಿ ಟಿ.ಎಸ್. ರಮೇಶ್ ಅವರು ಸಹಕರಿಸಿದರು. ಡಾ. ರಾಮಕೃಷ್ಣ ಮರಾಠೆ ಬೆಳಗಾವಿ, ಡಾ. ಹರೀಶ ಹೆಗಡೆ ವಿಜಯಪುರ, ಸಂತೋಷ ಕುಮಾರ ಉಪಾಧ್ಯಾಯ ಸಹಕರಿಸಿದರು. ಕಾರ್ಯಕ್ರಮದ ಪರಿಕಲ್ಪನೆ, ಸಂಯೋಜನೆ ರಂಗಕರ್ಮಿ, ದಿನಕರದ ಸಂಚಾಲಕರಾದ ಶ್ರೀ ಶಿವಾನಂದ ಇಂಗಳೇಶ್ವರ ಅವರದ್ದಾಗಿತ್ತು. ☐

**ಅರವಿಂದ ಬಿಜ್ಜೈ**


## ಓಂ e-ಕ್ರೋನ್ (e-ಜೀವನ)

ಕ್ರೀಮಿಯು ಆಡುತಿರುವ ಆಟ
ಆಟ–ಪಾಠವೆಲ್ಲಾ e–ಶಾಲೆಯಲ್ಲಿ
ಕಛೇರಿ ಕೆಲಸವೆಲ್ಲ e-ಕಛೇರಿಯಲ್ಲಿ
ಸಂಭ್ರಮ–ಸಂತಾಪವೆಲ್ಲಾ e-ಫೋನಿನಲ್ಲಿ
ದವಸ–ಧಾನ್ಯ ಖರೀದಿಯೆಲ್ಲಾ e-ಅಂಗಡಿಯಲ್ಲಿ
ಪೂಜೆ–ಪುರಸ್ಕಾರವೆಲ್ಲಾ e-ಗುಡಿಯಲ್ಲಿ
ಉಪನ್ಯಾಸ–ಭಾಷಣವೆಲ್ಲಾ e-ಕಾರ್ಯಕ್ರಮದಲ್ಲಿ

ಮುಂದಿನ ಬೇಟಿಯೆಲ್ಲಾ e-ಜನ
ದುಡಿಮೆ–ಲಾಭವೆಲ್ಲಾ e-ಧನ
ಬ್ಯಾಂಕ್ ವ್ಯವಹಾರ e-ಬ್ಯಾಂಕಿನಲ್ಲಿ
ಕ್ಷೇಮ–ಸಮಾಚಾರವೆಲ್ಲಾ e-ಪರದೆಯಲ್ಲಿ


ಬದುಕು ಚಿಕ್ಕದಾಗಿ ಭಾವಾಗಳ
ಪಟ್ಟಿಯೆಲ್ಲಾ e-ಪೆಟ್ಟಿಗೆಯಲ್ಲಿ
ಆ ಯುಗದ ಕಾಲವೆಲ್ಲ ಇತಿಹಾಸ ಸೇರಿ
ಓಂ–e-ಕ್ರೋನ್ ದೆಸೆಯಿಂದ
electronic-ಜೀವನಕ್ಕೆ ಸ್ವಾಗತ.
ಮುಂದಿನ ದಿನವೆಲ್ಲಾ e-ಜೀವನ

**ಅಶ್ವಿನಿ ಬಿ.ಎಸ್.**



ನುಡಿನಮನ

# ಕೊಂಕಣಿಯ ಕರ್ಮಯೋಗಿ ಬಸ್ತಿ ವಾಮನ ಶೆಣೈ



ಹಿರಿಯ ಸಾಹಿತಿ ಕೊಂಕಣಿಯ ದಿಗ್ಗಜ ಬಸ್ತಿ ವಾಮನ ಶೆಣೈ ಕಳೆದ ದಿನಾಂಕ 02.01.2022 ರಂದು ವಿಧಿವಶರಾಗಿರುವುದನ್ನು ನೆನೆದಾಗ ನನ್ನ ಕಣ್ಣುಗಳು ತೇವಗೊಂಡವು.

1934ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಜನಿಸಿದ ಅವರು ಇಪ್ಪತ್ತರ ಹರೆಯದಲ್ಲೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ವಾಣಿಜ್ಯ ಘಟಕ ಇಂಟಕ್ ನೊಂದಿಗೆ ಸಕ್ರಿಯರಾಗಿದ್ದು ಆಗಲೇ ಹುಟ್ಟೂರಲ್ಲಿ ಸರಸ್ವತಿ ಕಲಾ ಪ್ರಸಾರಕ ಸಂಘ ಮತ್ತು ಸಂಗೀತ ಶಾಲೆಗಳನ್ನು ಸ್ಥಾಪಿಸಿದ್ದರು. ಇವರ ನಾಯಕತ್ವ ಗುಣಗಳನ್ನು ಅರಿತ ದಿ. ಟಿ.ಎ. ಪೈ ಅವರು ಶೆಣೈಯವರನ್ನು ಸಿಂಡಿಕೇಟ್ ಬ್ಯಾಂಕ್ ಸೇರುವಂತೆ ಆಹ್ವಾನಿಸಿದ್ದರು. ಬ್ಯಾಂಕರ್ ಆಗಿ ಶೆಣೈ ಅವರು ಒಮ್ಮೆ ನೇತ್ರಾವತಿ ನದಿಯ ಪ್ರವಾಹ ಪೀಡಿತ ಜನರ ಪರಿಹಾರಾರ್ಥ ಯೋಜನೆಗಳನ್ನು ರೂಪಿಸಿದ್ದರು.

ಬ್ಯಾಂಕ್‌ನಿಂದ 1992ರಲ್ಲಿ ಸ್ವಯಂ ನಿವೃತ್ತಿ ಪಡೆದ ನಂತರ ಬಸ್ತಿ ವಾಮನ ಶೆಣೈಯವರು ಸಂಪೂರ್ಣವಾಗಿ ಕೊಂಕಣಿ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸಿದರು. ಆಲ್ ಇಂಡಿಯಾ ಕೊಂಕಣಿ ಪರಿಷತ್ ಸ್ವಾತಂತ್ರ್ಯ ಪೂರ್ವ (1939)ದಲ್ಲೇ ಇದ್ದ ಹಳೆಯ ಕೊಂಕಣಿ ಸಂಸ್ಥೆಯೊಂದಿಗೆ ಗುರುತಿಸಿಕೊಂಡಿದ್ದ ಶೆಣೈಯವರು ಕೊಂಕಣಿ ಜಾಥಾ ಆಂದೋಲನ, 1993ರಲ್ಲಿ ಕೊಂಕಣಿ ಭಾಷಾ ಮಂಡಲದ ಅಧ್ಯಕ್ಷರಾಗಿ ಕೆನರಾ ಹೈಸ್ಕೂಲಿನಲ್ಲಿ ಕೊಂಕಣಿ ಭೋದನೆ ಆರಂಭಿಸಿದ್ದರು. ಕರ್ನಾಟಕದಲ್ಲಿ ಕೊಂಕಣಿ ಅಕಾಡೆಮಿಯ ಸ್ಥಾಪನೆಗಾಗಿ ಹೋರಾಡಿದ್ದರ ಫಲವಾಗಿ ಅಂದಿನ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯಿಲಿಯವರು ಪುರಸ್ಕರಿಸಿದ ನಂತರ 1994–95ರಲ್ಲಿ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿತು.

ಕೊಂಕಣಿ ಭಾಷೆಯನ್ನಾಡುವ ವಿವಿಧ ಸಮುದಾಯ ಮತ್ತು ಧರ್ಮಗಳ ಜನರನ್ನು ಒಗ್ಗೂಡಿಸಿದ ಮಹತ್ವದ ಕೆಲಸವನ್ನು ವಾಮನ ಶೆಣೈಯವರು 1995ರಲ್ಲಿ ಮೊದಲ ಬಾರಿಗೆ ವಿಶ್ವ ಕೊಂಕಣಿ ಸಮಾವೇಶವನ್ನು ಮಂಗಳೂರಿನಲ್ಲಿ ಆಯೋಜಿಸಿದರು. ಅದರ ಸಂಚಾಲಕರಾಗಿ ಅವರು ಕೇಂದ್ರ ಸಚಿವೆ ಮಾರ್ಗರೇಟ್ ಆಳ್ವ, ರಾಜ್ಯದ ಅಂದಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಅವರನ್ನು ಆಹ್ವಾನಿಸಿ 'ಕೊಂಕಣಿ ಸರ್ದಾರ್' ಎನಿಸಿಕೊಂಡರು. ಐದು ಸಾವಿರಕ್ಕೂ ಹೆಚ್ಚು ಕೊಂಕಣಿ ಭಾಷಿಕರು ಇಲ್ಲಿ ಭಾಗವಹಿಸಿದ್ದು ವಿಶೇಷ.

ಶೆಣೈಯವರು 1996ರಲ್ಲಿ ಉತ್ತರ ಅಮೇರಿಕಾದಲ್ಲಿ ನಡೆದ ಕೊಂಕಣಿ ಸಮಾವೇಶವನ್ನು ಉದ್ಘಾಟಿಸಿ ಜಾಗತಿಕವಾಗಿ ಕೊಂಕಣಿ ಭಾಷಿಕರು ಒಂದಾಗುವಂತೆ ಶ್ರಮಿಸಿದರು. 1997ರಿಂದ 2001ರ ವರೆಗೆ ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಅವರು ದೇಶಾದ್ಯಂತ ಕಾರ್ಯಕ್ರಮಗಳನ್ನು ಸಂಘಟಿಸಿದರು. 1998ರಲ್ಲಿ ದೆಹಲಿಯಲ್ಲಿ ನಡೆದ 'ಕೊಂಕಣಿ ಕಲಾ ಉತ್ಸವ' ಮತ್ತು ಶಿಬಿರಗಳು ಇದಕ್ಕೆ ನಿದರ್ಶನ. ಶೆಣೈಯವರು ಆಲ್ ಇಂಡಿಯಾ ಕೊಂಕಣಿ ಪರಿಷತ್ತಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

ವಿಶ್ವ ಕೊಂಕಣಿ ಸಮಾವೇಶದ ಮುಖ್ಯ ನಿರ್ಣಯಗಳಲ್ಲಿ ಒಂದಾದ ವಿಶ್ವ ಕೊಂಕಣಿ ಕೇಂದ್ರದ ಸ್ಥಾಪನೆಯನ್ನು ವಾಮನ ಶೆಣೈಯವರು ಸಾಕಾರಗೊಳಿಸಿದರು. ಇದರ ಸ್ಥಾಪಕರಾಗಿ ಅವರು ರಚನಾತ್ಮಕ ಯೋಜನೆಗಳನ್ನು ರೂಪಿಸಿದರು. ವಿವಿಧ ಭಾಷೆಗಳೊಂದಿಗೆ ಕೊಂಕಣಿಯ ಸಾಂಸ್ಕೃತಿಕ ವಿನಿಮಯ, ಕೊಂಕಣಿ ಭಾಷೆಯನ್ನಾಡುವ ಅಲಕ್ಷಿತ ಸಮುದಾಯಗಳ ಅಧ್ಯಯನ, ಕೊಂಕಣಿ ಕೃತಿಗಳ ಸಂರಕ್ಷಣೆ ಮತ್ತು ಪ್ರಕಟಣೆ ಇಲ್ಲಿನ ಯೋಜನೆಗಳಲ್ಲಿ ಒಳಗೊಂಡಿದೆ. 2009ರಲ್ಲಿ ಸ್ಥಾಪನೆಯಾದ ಕೊಂಕಣಿ ಕೇಂದ್ರದಲ್ಲಿ ಸುಸಜ್ಜಿತ ಗ್ರಂಥಾಲಯ, ಸಂಗ್ರಹಾಲಯ ಮತ್ತು ವಿಚಾರ ಸಂಕಿರಣ ಭವನಗಳಿವೆ. ಅಲ್ಲದೆ ವಿಶ್ವ ಕೊಂಕಣಿ ಭಾಷಾ ಸಂಸ್ಥೆ, ವರ್ಲ್ಡ್ ಕೊಂಕಣಿ ಹಾಲ್ ಆಫ್ ಫೇಮ್ ಹಾಗೂ ಕೊಂಕಣಿ ಎಥೆನಿಕ್ ಶಾಪ್ ಕೂಡಾ ಆರಂಭಿಸಲಾಗಿದೆ.

ಬಸ್ತಿ ವಾಮನ ಶೆಣೈ ಅವರಿಗೆ ಕರ್ನಾಟಕ ಸರಕಾರ 2010ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಕೊಂಕಣಿ ದ್ರಾವಿಡ ಭಾಷೆಗಳಿಗೆ ನಿಕಟ ಸಂಬಂಧ ಹೊಂದಿದೆ. ಕೊಂಕಣಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಅಭ್ಯುದಯಕ್ಕೆ ನಿರಂತರ ಶ್ರಮಿಸಿದ ಕರ್ಮಯೋಗಿ ಬಸ್ತಿ ವಾಮನ ಶೆಣೈ ಅವರಿಗೆ ನನ್ನ ನಮನಗಳು.

ನಾನು ದೆಹಲಿಗೆ ಬಂದ ನಂತರ ಅವರ ಪುತ್ರ ದಿನೇಶ್ ಶೆಣೈ ನನಗೆ ಆತ್ಮೀಯರಾಗಿದ್ದರು. ದೆಹಲಿಯಲ್ಲೇ ಇದ್ದ ಗೆಳೆಯ ಗುರು ಬಾಳಿಗ ಅವರು ಶೆಣೈಯವರು ಸ್ಥಾಪಿಸಿದ ವಿಶ್ವ ಕೊಂಕಣಿ ಕೇಂದ್ರದ ಮಹತ್ವದ ಜವಾಬ್ದಾರಿ ವಹಿಸಲು ತೆರಳಿದ್ದರು. ನನ್ನ ಅಣ್ಣ ಡಾ. ವೈ. ರವೀಂದ್ರನಾಥ್ ರಾವ್ ಓರ್ವ ಸಮಾಜಶಾಸ್ತ್ರಜ್ಞರಾಗಿ ವಿಶ್ವ ಕೊಂಕಣಿ ಕೇಂದ್ರದಲ್ಲಿ ತೊಡಗಿಸಿಕೊಂಡಿದ್ದರು. ಇವೆಲ್ಲಾ ವಾಮನ ಶೆಣೈಯವರ ಬಗೆಗೆ ಇನ್ನಷ್ಟು ತಿಳಿಯಲು ಅವಕಾಶ ಮಾಡಿತು. ❑

***ಡಾ. ಅವನೀಂದ್ರನಾಥ್ ರಾವ್***

## ಒಂಟಿತನದಲ್ಲಿ ಏಕಾಂತ

ಒಂಟಿತನವೇಕೋ ಕಾಡುತಿದೆ ಇಂದು
ಒಂಟಿ ಮಾಡಿದವನ ಕೇಳಬೇಕೆನಿಸುತ್ತಿದೆ
ನೀನು ಹೋದೆ ನನ್ನ ಬಿಟ್ಟು ಏಕೆಂದು
ಇಹುದೆಲ್ಲ ನಿಧಿ ಸುತ್ತ ಒಂಟಿಯಾದೆ ಏಕಿಂದು
ತೋರಿದ ಗುರು ಸುತ್ತಲಿರುವ ಜಗವ ನೋಡೆಂದು
ರವಿಚಂದ್ರ ತಾರಾಗಣ ಗಾಳಿ ಇಲ್ಲವೇ ಒಂಟಿಯಾಗಿಂದು
ಅದ ಕಂಡು ಬೆರಗಾದೆ ಹೌದೆಂದು
ನನ್ನೊಳಗಿನ ಚೇತನವನರಿಯಲು ಗುರುವಾಯ್ತು ಒಂಟಿತನವಿಂದು,
ಮುಂದೊಮ್ಮೆ ಗೆಲ್ಲುವೆ, ಬದಲಿಸಿಕೊಳ್ಳುವೆ
ಏಕಾಂತವಾಗಿ ಬದುಕಲು ಅಂದು
ಇರಲಿ ಆಶಯವು ಬರಲಿ ಬೇಸರವೂ ಮುಂದೊಮ್ಮೆ
ಗಳಿಸುವೆ ಏಕಾಂತವನು! ಏಕಾಂತವನು!

***ಶಾಂತ ಕಿರಣ***

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ಹೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ಧವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು-ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING
Office :
B-303, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
Feb-2022, Vol. No.32, Issue No. 5, Price Rs.1/-
RNI Regn. No. 53405/91, DL-SW-01/4016/22-24
Date of Publication : Feb 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P




2020-2021 ನೇ ಸಾಲಿನ ಪದ್ಮಶ್ರೀ ಪುರಸ್ಕೃತರಾದ ಡಾ. ಬಿ.ಎನ್. ಗಂಗಾಧರ್, ಎಂ.ಪಿ. ಗಣೇಶ್, ವಿದುಷಿ ಕೆ.ಎಸ್. ಜಯಲಕ್ಷ್ಮಿ ಮತ್ತು ವೆಂಕಟೇಶ್ ಕೆ.ವೈ. ಅವರುಗಳಿಗೆ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ವತಿಯಿಂದ ಅಭಿನಂದನಾ ಕಾರ್ಯಕ್ರಮದಲ್ಲಿ ಪೂಜ್ಯ ಸ್ವಾಮೀಜಿಯವರು ಮತ್ತು ಅತಿಥಿಗಳೊಂದಿಗೆ ಪದ್ಮಶ್ರೀ ಪುರಸ್ಕೃತರು




ನಾಡಪ್ರಭು ಕೆಂಪೇಗೌಡ ಫೌಂಡೇಷನ್ ದಿನಾಂಕ 19.12.2021ರಂದು ಆಯೋಜಿಸಿದ ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳು-ಮಾ. ಕ್ಷಿತಿಜ್ ಎಸ್. (12ನೇ ತರಗತಿ) ಶ್ರೀಮತಿ ರೂಪಶ್ರೀ ಹಾಗೂ ಶ್ರೀ ನರಸಿಂಹ ಮೂರ್ತಿ ಅವರ ಪುತ್ರ, ಕು. ನಿತ್ಯಶ್ರೀ ಎ. (12ನೇ ತರಗತಿ) ಶ್ರೀಮತಿ ರೂಪಶ್ರೀ ಹಾಗೂ ಶ್ರೀ ಅಶೋಕ ಎಂ. ಇ.ಟಿ. ಅವರ ಪುತ್ರಿ, ಮಾ. ಶ್ರೀಧನ್ ಮೂರ್ತಿ (12ನೇ ತರಗತಿ) ಶ್ರೀಮತಿ ಸುಜಾತ ಹಾಗೂ ಶ್ರೀ ಸುರೇಂದ್ರ ಮೂರ್ತಿ ಅವರ ಪುತ್ರ, ಕು. ರಜನಿ (12ನೇ ತರಗತಿ) ಶ್ರೀಮತಿ ಹೇಮ ಹಾಗೂ ಶ್ರೀ ಕಾಳಯ್ಯ ಅವರ ಪುತ್ರಿ, ಕು. ಪ್ರೇರಣಾ ರಾವ್ (12ನೇ ತರಗತಿ) ಶ್ರೀಮತಿ ಪೂಜಾ ರಾವ್ ಹಾಗೂ ಶ್ರೀ ಪ್ರದೀಪ್ ರಾವ್ ಅವರ ಪುತ್ರಿ, ಕು. ರಮ್ಯ (12ನೇ ತರಗತಿ) ಶ್ರೀಮತಿ ಶಾರದ ಹಾಗೂ ಶ್ರೀ ಮಲ್ಲನಗೌಡ ಅವರ ಪುತ್ರಿ, ಕು. ತೀಕ್ಷ್ಣ ಜೆ. (12ನೇ ತರಗತಿ) ಶ್ರೀಮತಿ ನಂದಿನಿ ಕೆ.ಇ. ಹಾಗೂ ಡಾ. ಆರ್. ಎಸ್. ಜಗದೀಶ್ ಅವರ ಪುತ್ರಿ, ಮಾ. ರಜತ್ ಗೋಸಾಲ್ (12ನೇ ತರಗತಿ) ಶ್ರೀಮತಿ ಲಲಿತಾ ಹಾಗೂ ಡಾ. ಮಂಜುನಾಥ್ ಗೋಸಾಲ್ ಅವರ ಪುತ್ರ, ಕು. ರಿದ್ಧಿ (12ನೇ ತರಗತಿ) ಶ್ರೀಮತಿ ಚಂದ್ರಕಲಾ ಬಿ. ಹಾಗೂ ಶ್ರೀ ಎನ್.ಎಸ್. ಮನೋಜ್ ಕುಮಾರ್ ಅವರ ಪುತ್ರಿ, ಮಾ. ಪ್ರಮೋದ್ ಕುಮಾರ್ (10ನೇ ತರಗತಿ) ಶ್ರೀಮತಿ ಪ್ರಿಯದರ್ಶಿನಿ ಹಾಗೂ ಶ್ರೀ ಮರಿಬಸಪ್ಪ ಅವರ ಪುತ್ರ, ಮಾ. ಸಂಜಯ್‌ಚಂದ್ರ (12ನೇ ತರಗತಿ) ಶ್ರೀಮತಿ ಶ್ರೀಲಕ್ಷ್ಮೀ ಹಾಗೂ ಶ್ರೀ ಚಂದ್ರಶೇಖರ ಜೋಳದರಾಶಿ ಅವರ ಪುತ್ರ, ಮಾ. ತರುಣ್ ಗೌಡ (10ನೇ ತರಗತಿ) ಶ್ರೀಮತಿ ಪುಷ್ಪ ಹಾಗೂ ಶ್ರೀ ಕೃಷ್ಣಪ್ಪ ಎಂ. ಅವರ ಪುತ್ರ, ಕು. ಲಕ್ಷಿತಾ ಜೈನ್ (10ನೇ ತರಗತಿ) ಶ್ರೀಮತಿ ಬಬಿತಾ ಜೈನ್ ಹಾಗೂ ಶ್ರೀ ಜಿನೇಂದ್ರ ಜೈನ್ ಅವರ ಪುತ್ರಿ.